# ಬೃಹಚ್ಚರಣ


**ಸಂಪಾದಕ ಸಮಿತಿ**

| | |
|---|---|
| ಎಸ್. ಸೋಮಸುಂದರ | ಪ್ರಧಾನ ಸಂಪಾದಕ |
| ವಿ. ಎಸ್. ಮಣಿ | ಕಾರ್ಯದರ್ಶಿ |
| ಕೆ.ಸಿ. ನಟರಾಜನ್ | ಸಂಚಾಲಕರು |
| ಅಚಲ ರಮೇಶ್ | ಸದಸ್ಯರು |
| ವೈ.ಜಿ. ಗಿರಿಶಾಸ್ತ್ರಿ | ಸದಸ್ಯರು |
| ಕೆ.ಎಸ್. ಮಧುಸೂದನ | ಗೌ॥ ಸಂಪಾದಕ |



ಸಂಪುಟ : 3 ಸಂಚಿಕೆ : 1 ತ್ರೈಮಾಸಿಕ ವಾರ್ತಾಪತ್ರ ಖಾಸಗಿ ಪ್ರಸಾರಕ್ಕಾಗಿ ಜನವರಿ–ಮಾರ್ಚ್ 2013








## ಅರ್ಪಣೆ

ಬೃಹಚ್ಚರಣ

ಈ ಸಂಚಿಕೆಯನ್ನು ಪ್ರಸಿದ್ಧ ಹಿಂದೂಸ್ಥಾನಿ ಸಂಗೀತ ವಿದ್ವಾಂಸರಾಗಿದ್ದ

ದಿ॥ ರಾಜಾಪುರದ ಶೇಷಾದ್ರಿ ಗವಾಯಿ ಅವರಿಗೆ ಶ್ರದ್ಧೆ ಹಾಗೂ ಗೌರವಗಳಿಂದ ಅರ್ಪಿಸಿದೆ.

## ಸಂಪಾದಕೀಯ

**'ಬೃಹಚ್ಚರಣ'** ಪತ್ರಿಕೆ ನಮ್ಮ ಸದಸ್ಯರಿಗೆ ಮೆಚ್ಚುಗೆಯಾಗುತ್ತಿರುವುದು ಸಂತಸದ ಸಂಗತಿ. ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಕವನ, ಕಿರುಗತೆ, ಅನುಭವ ಕಥನ ಇತ್ಯಾದಿ ಲೇಖನಗಳನ್ನು ಪ್ರಕಟಣೆಗಾಗಿ ಕಳುಹಿಸಿ. ಲೇಖನ ಕಳುಹಿಸುವಾಗ ಜೊತೆಯಲ್ಲಿ ನಿಮ್ಮ ಛಾಯಾಚಿತ್ರ ಇರಲಿ.

ಮುಂದಿನ ಸಂಚಿಕೆಗಳ ಗುಣಮಟ್ಟವನ್ನು ಹೆಚ್ಚಿಸಲು ಇನ್ನೂ ಹೆಚ್ಚಿನ ಪ್ರಾಮಾಣಿಕ ಪ್ರಯತ್ನ ಪಡುತ್ತೇವೆ.

ದಯವಿಟ್ಟು ಬೃಹಚ್ಚರಣ ಗ್ರಾಮಗಳನ್ನು ಕುರಿತು, ಆಯಾಗ್ರಾಮದ ಪ್ರಮುಖ ಸಾಂಸ್ಕೃತಿಕ ಕುರುಹುಗಳ ಛಾಯಾಚಿತ್ರದೊಂದಿಗೆ ಲೇಖನವನ್ನು ಕಳುಹಿಸಿಕೊಡಬೇಕಾಗಿ ವಿನಂತಿ.

ನಿವೃತ್ತರು, ಯುವಕರು, ಗೃಹಿಣಿಯರು, ಉದ್ಯೋಗಿಗಳು, ಇತ್ಯಾದಿ ಎಲ್ಲ ವರ್ಗದ ಬಾಂಧವರೂ 'ಬೃಹಚ್ಚರಣ' ಪತ್ರಿಕೆಗೆ ನಿಮ್ಮ ಅಮೂಲ್ಯ ಸಲಹೆ, ಲೇಖನ, ಸಹಕಾರಗಳನ್ನು ನೀಡಬೇಕೆಂಬುದು ಸಂಪಾದಕನ ವಿನಮ್ರ ನಿರೀಕ್ಷೆ.



■ ಕೆ.ಎಸ್. ಮಧುಸೂದನ

## ಅಧ್ಯಕ್ಷರ ನುಡಿ

7

ಹೊಸ ವರ್ಷ "ವಿಜಯನಾಮ ಸಂವತ್ಸರ"ವು ತಮ್ಮ ಕುಟುಂಬದವರೆಲ್ಲರಿಗೂ ಶುಭ ತಂದು, ಮನೆಗಳಲ್ಲಿ ಸಂತಸದ ಕಾರ್ಯಗಳು ನೆರವೇರಲೆಂದು ಸಂಘದ ಎಲ್ಲ ಕಾರ್ಯಕಾರಿ ಸಮಿತಿ ಸದಸ್ಯರ ಪರವಾಗಿ ಶುಭ ಹಾರೈಸುತ್ತೇನೆ.

ದಿನಾಂಕ 16–3–2013ರಂದು ಕಿತ್ತಿಗಾನಹಳ್ಳಿಯಲ್ಲಿ ನಡೆದ ನಾಗಾರಾಧನೆ, ಸುಬ್ರಹ್ಮಣ್ಯ ಸ್ವಾಮಿ ಉತ್ಸವ ಹಾಗೂ 17–3–2013ರಂದು ನಡೆದ ಶ್ರೀನಿವಾಸ ಕಲ್ಯಾಣೋತ್ಸವಕ್ಕೆ ನಮ್ಮ ಬಂಧುಗಳು ಸೇರಿ ತನಿ ಎರೆದು, ಧಾರ್ಮಿಕ ಪೂಜಾಕೈಂಕರ್ಯದಲ್ಲಿ ಭಾಗವಹಿಸಿದ್ದಕ್ಕೆ ವಂದನೆಗಳು. ಯಾವುದೇ ಅಹಿತಕರ ಘಟನೆಗಳು ನಡೆಯದೆ, ಸಂಪೂರ್ಣ ಶಿಸ್ತುಬದ್ಧವಾಗಿ ಪೂಜೆ, ಪ್ರಸಾದ ವಿನಿಯೋಗ ಕಾರ್ಯಕ್ರಮಗಳು ಸುಗಮವಾಗಿ ನಡೆದಿರುವುದಕ್ಕೆ ನಮ್ಮ ಸಮಿತಿಯ ಪ್ರತಿಯೊಬ್ಬ ಸದಸ್ಯರೂ ಅಭಿನಂದನಾರ್ಹರು. ದಾನಿಗಳಿಗೆ ಸಂಘದ ಕೃತಜ್ಞತೆ. ಸಮಾರಂಭದ ಯಶಸ್ಸಿಗೆ ವೇ॥ ಬ್ರ॥ ನಂಜುಂಡ ದೀಕ್ಷಿತರ ಕುಟುಂಬದವರು ಹಾಗೂ ಕಿತ್ತಿಗಾನಹಳ್ಳಿಯಲ್ಲಿ ವಾಸಿಸುತ್ತಿರುವ ಕುಟುಂಬದವರ ಸೇವೆ ಶ್ಲಾಘನೀಯ.

ಇದೇ ಸಂದರ್ಭದಲ್ಲಿ ಸಂಘದ ಕರೆಗೆ ಓಗೊಟ್ಟು ಶಾಶ್ವತ 'ಅನ್ನಸಂತರ್ಪಣಾ ನಿಧಿಗೆ' ಹೆಚ್ಚು ಹಣ ದೇಣಿಗೆ ಬಂದಿರುವುದೂ, ಇನ್ನೂ ಸಂಘದ ಹಲವಾರು ಹಿತೈಷಿಗಳು ನಿಧಿಗೆ ದಾನಿಗಳಾಗುತ್ತೇವೆಂದು ಇಚ್ಛೆ ವ್ಯಕ್ತಪಡಿಸಿರುವುದು ಸಂತಸದ ವಿಷಯ.

'ಬೃಹಚ್ಚರಣ' ಸಂಚಿಕೆಗಳು, ನಾವು ಹಮ್ಮಿಕೊಳ್ಳುವ ಕಾರ್ಯಗಳ ಕೈಕನ್ನಡಿಯಾಗಿರಬೇಕೆಂಬುದು ನಮ್ಮ ಸಂಕಲ್ಪ. ನಿಮ್ಮೆಲ್ಲರ ಸಲಹೆಗೆ ಮನ್ನಣೆ ಇದೆ. ಪತ್ರರೂಪದಲ್ಲಿ ಸಲಹೆ ಬರೆದು ಕಳುಹಿಸಿ. ಬೃಹಚ್ಚರಣ ವೆಬ್‌ಸೈಟ್‌ನ್ನು ಸದಸ್ಯರೇ ನಿರ್ವಹಿಸುತ್ತಿದ್ದು, ಸಂಘದ ಸುದ್ದಿ ವಿವರ ಇರುತ್ತದೆ.

ಈಗಾಗಲೇ ನಾಗಾರಾಧನೆ ಸಮಯದಲ್ಲಿ 2013–14ನೇ ಇಸವಿ, ಸಂಘದ ಕ್ಯಾಲೆಂಡರ್ ಬಿಡುಗಡೆಗೊಂಡು, ತಮಗೆ ತಲುಪಿರಬಹುದು. ಬಾರದಿದ್ದಲ್ಲಿ ಸಂಘದ ಕಾರ್ಯಕಾರಿ ಸಮಿತಿ ಸದಸ್ಯರನ್ನು ವಿಚಾರಿಸಿ. ದಿನಚರಿ ಕ್ಯಾಲೆಂಡರ್ ಬರಲು ಸಹಕರಿಸಿದ ಪ್ರಾಯೋಜಕರಿಗೆ ವಂದನೆಗಳು.

26–05–2013ರಂದು ಸರ್ವಸದಸ್ಯರ ಸಭೆ ನಡೆಯಲ್ಲಿದ್ದು ತಮ್ಮೆಲ್ಲರ ಆಗಮನ ನಿರೀಕ್ಷೆಯಲ್ಲಿದ್ದೇವೆ. 16ನೇ ಪುಟದಲ್ಲಿನ ಸಂಘದ ವರ್ಷಾಂತ್ಯದ ಆಯವ್ಯಯ ಪಟ್ಟಿಯನ್ನು ಗಮನಿಸಿ. ಶ್ರೀ ಆರ್.ಜಿ. ವಿಜಯಸಾರಥಿ ಅವರ ನಿಧನಕ್ಕೆ ಸಂಘವು ಸಂತಾಪವನ್ನು ಸೂಚಿಸುತ್ತದೆ.

ನಮ್ಮ ಸಮುದಾಯದ ಸದಸ್ಯರು ಸಂಘ ಹಮ್ಮಿಕೊಳ್ಳುತ್ತಿರುವ ಕಾರ್ಯಕ್ರಮಗಳ ಬಗ್ಗೆ ಮೆಚ್ಚಿಗೆ ಸೂಚಿಸಿರುವುದು ಸಂತೋಷ. ನೀವು ನಮ್ಮ ಮೇಲಿಟ್ಟಿರುವ ವಿಶ್ವಾಸಕ್ಕೆ ನಾವು ಚಿರಋಣಿಗಳಾಗಿ, ನಿಮ್ಮ ನಂಬಿಕೆಯನ್ನು ಹುಸಿಗೊಳಿಸುವುದಿಲ್ಲವೆಂದು ತಿಳಿಸಬಯಸುತ್ತೇನೆ.



■ ಎಸ್. ಸೋಮಸುಂದರ

## ಮೈ.ಮಂ.ದ್ರಾ.ಬೃ. ಸಂಘದ ಕಾರ್ಯಕಾರಿ ಸಮಿತಿ

| | | |
|---|---|---|
| ಅಧ್ಯಕ್ಷರು | : | ಎಸ್. ಸೋಮಸುಂದರ |
| ಉಪಾಧ್ಯಕ್ಷರು | : | ಕೆ.ಬಿ. ಮುರಳಿ |
| | | ಕೆ. ಮಂಜುನಾರಾಯಣ್ |
| ಕಾರ್ಯದರ್ಶಿ | : | ವಿ.ಎಸ್. ಮಣಿ |
| ಸಹಕಾರ್ಯದರ್ಶಿ | : | ವಿ. ಅರುಣ |
| ಖಜಾಂಚಿ | : | ಎಸ್. ಸತ್ಯನಾರಾಯಣ |
| ಲೆಕ್ಕಪರಿಶೋಧಕರು | : | ಎಚ್.ಕೆ. ಶಶಿಧರ್ |

ಸದಸ್ಯರು : ಆರ್.ಎ. ಈಶ್ವರನ್, ಟಿ.ಎಸ್. ಮಣಿ, ಎಸ್. ಶ್ರೀನಿವಾಸನ್, ಆರ್. ಗೋಪಾಲಕೃಷ್ಣ, ಎಸ್. ಸಿ. ಶ್ರೀನಿವಾಸ, ಬಿ. ಶ್ರೀಧರ್, ಕೆ. ಜಿ. ವೆಂಕಟೇಶ್, ಸರಸ್ವತಿ ನಟರಾಜನ್, ಎ.ವಿ. ಮಂಜುನಾಥ, ಟಿ.ಪಿ. ಸೂರ್ಯನಾರಾಯಣ, ಗಣೇಶ ಶ್ರೀಧರ್, ಟಿ.ಎಸ್. ನಾಗೇಶ್, ಟಿ.ಎಸ್. ರಮೇಶ್, ಕೆ.ಸಿ. ನಟರಾಜನ್

ಸಲಹೆ : ಕೆ.ಎಸ್. ಮಧುಸೂದನ




ಶ್ರೀಮತಿ ಗಾಯತ್ರಿ ಮತ್ತು ಶ್ರೀ ಉಮೇಶ್

## ಧನ್ಯವಾದಗಳು

'ಬೃಹಚ್ಚರಣ' ಸಂಘದ ಸದಸ್ಯರು ಹಾಗೂ ಹಿತೈಷಿಗಳಾದ **ಶ್ರೀ ಉಮೇಶ್** ಹಾಗೂ ಪತ್ನಿ **ಶ್ರೀಮತಿ ಗಾಯತ್ರಿ**ಯವರು ಶ್ರೀ ಉಮೇಶ್‌ರವರ ತಂದೆ **ಶ್ರೀ ಸೋಮಶೇಖರ್** ಹಾಗೂ ತಾಯಿ **ಶ್ರೀಮತಿ ಸರಸಮ್ಮ**ನವರ ಹೆಸರಿನಲ್ಲಿ **"ಅನ್ನಸಂತರ್ಪಣಾ"** ನಿಧಿಗೆ **25,000** ರೂಪಾಯಿಗಳನ್ನು ನೀಡಿರುವುದಕ್ಕೆ ಸಂಘವು ಕೃತಜ್ಞತೆ ಅರ್ಪಿಸುತ್ತದೆ.

## ಕೃತಜ್ಞತೆಗಳು

'ಬೃಹಚ್ಚರಣ' ಸಂಘದ ಹಿತೈಷಿ **ಶ್ರೀಮತಿ ಇಂದಿರಾ ಶಂಕರನಾರಾಯಣ** ಮತ್ತು ತಂಗಿಯರಾದ **ಶ್ರೀಮತಿ ಪಾರ್ವತಿ ರಾಧಾಕೃಷ್ಣ, ಶ್ರೀಮತಿ ಶಾಂತಾ ಲಕ್ಷ್ಮೀನಾರಾಯಣ, ಶ್ರೀಮತಿ ನಾಗವೇಣಿ ಶಾಮಣ್ಣ, ಶ್ರೀಮತಿ ಪಂಕಜ ಶ್ರೀನಿವಾಸಮೂರ್ತಿ** ಹಾಗೂ **ಶ್ರೀಮತಿ ರುಕ್ಮಿಣಿ ಶಿವರಾಂ** ಅವರುಗಳು ಅವರ ತಂದೆ **ಶ್ರೀ ಸಣ್ಣೆ ರಾಮಯ್ಯ** ಹಾಗೂ ತಾಯಿ **ಶ್ರೀಮತಿ ವೆಂಕಟಲಕ್ಷ್ಮಮ್ಮ**ನವರ ಹೆಸರಿನಲ್ಲಿ ಶಾಶ್ವತ **"ಅನ್ನಸಂತರ್ಪಣಾ"** ನಿಧಿಗೆ **10,000/- ರೂ.**ಗಳನ್ನು ನೀಡಿರುತ್ತಾರೆ. ಸಂಘವು ಇವರೆಲ್ಲರಿಗೂ ಕೃತಜ್ಞತೆ ಅರ್ಪಿಸುತ್ತದೆ.



ತಿಮ್ಮರಾಯ ಸ್ವಾಮಿ ದೇವಾಲಯ, ಆನೇಕಲ್

## ಬೃಹಚ್ಚರಣ ಗ್ರಾಮಗಳು - 5. ಆನೇಕಲ್

(ಬೆಂಗಳೂರಿನಿಂದ ಆಗ್ನೇಯಕ್ಕೆ ೩೬ ಕಿ.ಮೀ.)

೧. ಸಗಟೂರು ಮನೆತನದ ಚಿಕ್ಕತಿಮ್ಮೇಗೌಡ ೧೮೦೦ರಲ್ಲಿ ಇದನ್ನು ನಿರ್ಮಿಸಿದ.

೨. ದೇವಾಲಯಗಳು :

| | |
|---|---|
| ೧. ತಿಮ್ಮರಾಯಸ್ವಾಮಿ | ೨. ಮಲ್ಲಿಕಾರ್ಜುನ |
| ೩. ಕಂಬದ ಗಣಪತಿ | ೪. ವೇಣುಗೋಪಾಲ |
| ೫. ಚೆನ್ನಕೇಶವ | ೬. ಧರ್ಮರಾಯ. |

೩. ಶಂಕರಮಠ

೪. ಆನೇಕಲ್ ಕರಗ ಪ್ರಸಿದ್ಧವಾದದ್ದು.

೫. ನೆಯ್ಗೆ ವೃತ್ತಿ ಹಾಗೂ ರೇಷ್ಮೆ ಮಗ್ಗಗಳು ಸಾಕಷ್ಟಿವೆ.

೬. ದ್ವಿದಳ ಧಾನ್ಯ, ರಾಗಿ, ಬತ್ತ, ಅವರೇಕಾಯಿ, ಸಾಸಿವೆ ಹಾಗೂ ಎಣ್ಣೆಬೀಜಗಳು ಇಲ್ಲಿನ ಮುಖ್ಯ ಬೆಳೆ.

೭. ಬನ್ನೇರುಘಟ್ಟ, ಮುತ್ಯಾಲಮಡು, ಚಿಕ್ಕತಿರುಪತಿ ಸುತ್ತಲಿನ ಪ್ರೇಕ್ಷಣೀಯ ಸ್ಥಳಗಳು.

೮. ಕ್ರಿಸ್ತ ಶಕಾರಂಭ ಕಾಲದ ಶಾಸನ ಬಸದಿ, ಬೂದಿಹಳ್ಳ ಪ್ರಾಚೀನ ಅವಶೇಷಗಳು.

೯. ವಿಮಾನವನ್ನು ಕುರಿತ ಆರಂಭದ ಪ್ರಯೋಗ ಮಾಡಿದವರಲ್ಲಿ ಆನೇಕಲ್ಲಿನ ಸುಬ್ಬರಾಯಶಾಸ್ತ್ರಿ ಮುಖ್ಯರು.

೧೦. ಬೃಹಚ್ಚರಣ ಕುಟುಂಬಗಳು : ಹೆಡ್ಮಾಸ್ಟರ್ ಕೃಷ್ಣಮೂರ್ತಿ, ಜವಳಿ ಅಂಗಡಿ ಸುಬ್ಬರಾಯರು, ಆನೇಕಲ್ ಶಿವರಾಮಯ್ಯ, ಬಿದಿರಗೆರೆ ನಾಗರಾಜ್, ಸೇಲಂ ರಾಮನಾಥ್, ಕೆ.ಟಿ. ಪಟ್ಟಾಭಿರಾಮನ್, ಗೆರಟಿಗನಹಳ್ಳಿ ಶಂಕರಪ್ಪ, ಅಗ್ರಹಾರದ ನಾಗರಾಜು, ಡಾ॥ ಸುಬ್ಬರಾಮಯ್ಯ, ಇನ್ನಕ್ಕಿ ಕೃಷ್ಣಪ್ಪ ಇವರ ಕುಟುಂಬಗಳು.



■ ರತ್ನ ಮಧುಸೂದನ

## ಬೃಹಚ್ಚರಣ–ಕನ್ನಡ : ದ್ವಿಭಾಷಿಕ ನಿಘಂಟು

31. **ಪಚ್ಮಾವು** (ನಾ) ತಂಬಿಟ್ಟು, ಶ್ರಾವಣ ಶನಿವಾರಗಳಂದು, ಇತರ ಹಬ್ಬಗಳಂದು ದೇವರಿಗೆ ಅರ್ಪಿಸುವ ನೈವೇದ್ಯ. ಎರಡು ರೀತಿಯ 'ಪಚ್ಮಾವು'ಗಳಿವೆ.

ಅ. ಬೆಲ್ಲದ ಬಿಸಿಯ ಪಾಕಕ್ಕೆ ತೊಳೆದ ಅಕ್ಕಿಯಹಿಟ್ಟು ಹಾಕಿ ಉಂಡೆ ಕಟ್ಟಿರುವುದು – ಮಾರಮ್ಮನಿಗೆ ನೈವೇದ್ಯ.

ಆ. ತೊಳೆದ ಅಕ್ಕಿ ಹಿಟ್ಟಿಗೆ ಬೆಲ್ಲ, ತುಪ್ಪ ಮತ್ತು ತೆಂಗಿನ ತುರಿ, ಏಲಕ್ಕಿ ಹಾಕಿ ಉಂಡೆ ಮಾಡುವುದು 'ಪಟ್ಣಿ' ದಿನದ ನೈವೇದ್ಯ.

**'ಪಟ್ಣಿ'ಲನ್ಕಿ ಪಚ್ಮಾವು ಪಣ್ಣಿರ್‌ಂದ**

ಪಟ್ಣಿ (=ಉಪವಾಸ–ತಮಿಳು) ದಿವಸ ತಂಬಿಟ್ಟು ಮಾಡಿದ್ದರು.

ತಣ್ + ಪಿಟ್ಟು = ತಂಬಿಟ್ಟು ಇದ್ದಂತೆ ಪಚ್+ಮಾವು <ದ್ರಾವಿಡ

32. **ವಾಟಮು**(ನಾ) ಅಕ್ಕಿ ರೊಟ್ಟಿ, ರಾಗಿ ರೊಟ್ಟಿ

**ಶನಿವಾರು ಪಲಾರುತ್ಕು ವಾಟಮು ಪಣ್ಣು.**

ಶನಿವಾರ ಫಲಹಾರಕ್ಕೆ ರೊಟ್ಟಿ ಮಾಡು.

ವಾಟಮು (=ಮಗುಚಿ ಹಾಕಿದ್ದು) <ದ್ರಾವಿಡ

33. **ಹಾಪೆ** (ನಾ) ಸೌಟು

**ಒರೊರ್ತ್ರು ಹಾಪೇಲೆ ತಾಳೀಕ್ರಾಳ್ದೆ.**

ಒಬ್ಬೊಬ್ಬರು ಸೌಟಿನಲ್ಲಿಯೇ ಒಗ್ಗರಣೆ ಹಾಕುತ್ತಾರೆ.

ಹಾಪೆ < ಪಾಪೆ (=ಕಣ್ಣುಗುಡ್ಡೆ) <ದ್ರಾವಿಡ

[ಗಮನಿಸಿ : ಸೌಟಿನ ಕ್ರಿಯಾಶೀಲ ಭಾಗ ಕಣ್ಣು ಪಾಪೆಯಂತಿರುತ್ತದೆ]

ಪೂರ್ವಕಾಲದಲ್ಲಿ ಹಳ್ಳಿಯ ಜನ ತೆಂಗಿನ ಚಿಪ್ಪಿಗೆ ಎರಡು ರಂಧ್ರ ಮಾಡಿ ಕೋಲು ಸಿಕ್ಕಿಸಿ ಬಡಿಸುತ್ತಿದ್ದರು. ಅದೇ ಆಕಾರದಲ್ಲಿ ಸೌಟು ರೂಪುಗೊಂಡಿದೆ.]

34. **ಅಲ್ಲೆ** (ನಾ) ಮಗುಚೇ ಕೈ

**ದೋಸೆ ತಿರುಂಬಿ ಪೋಡುತ್ಕು ಅಲ್ಲೆ ವಾಂಕುಂಡ್ ವಾ**

ದೋಸೆಯನ್ನು ತಿರುವಿಹಾಕಲು ಮಗುಚೆಕೈ ತೆಗೆದುಕೊಂಡು ಬಾ.

ಅಲ್ಲೆ <ದ್ರಾವಿಡ

35. **ಪಟ್ಣಿ** (ನಾ) ಉಪವಾಸ ಮಾಡುವ ಒಂದು ವ್ರತದ ಹೆಸರು. ಈ ಆಚರಣೆ ಬೃಹಚ್ಚರಣರಲ್ಲಿದೆ.

ಶ್ರಾವಣ ಶನಿವಾರ ಪಚ್ಮಾವು (=ತಂಬಿಟ್ಟು) ನೈವೇದ್ಯಕ್ಕಿಟ್ಟು ದೀಪ ಬೆಟ್ಟ ಹತ್ತಿದ ಮೇಲೆ (=ಆರಿದ ಮೇಲೆ) ಪ್ರಸಾದವಾಗಿ ತಿನ್ನುತ್ತಾರೆ. ಅಂದು 'ಪಚ್ಮಾವು' ಬಿಟ್ಟು ಬೇರೆ ಆಹಾರವಿಲ್ಲ.

**ನೀ ಒನ್ನಿಕಿ ಪಟ್ಣಿ ಪಣ್ಣಾಕ್ರೆ?**

ನೀನು ಯಾವತ್ತು ಪಟ್ಣಿ (=ಉಪವಾಸ ವ್ರತ) ಮಾಡುತ್ತೀಯ? <ದ್ರಾವಿಡ

■ ಕೆ.ಎಸ್. ಮಧುಸೂದನ

## ಯುಗಾದಿ "ವಿಜಯನಾಮ ಸಂವತ್ಸರ"



ಈ 2013ನೇ ಯುಗಾದಿಯಿಂದ ವಿಜಯನಾಮ ಸಂವತ್ಸರ ಪ್ರಾರಂಭ ವಾಗುತ್ತದೆ. ಇಷ್ಟು ದಿನ ಆದ ಆನಂದವನ್ನು ಆಚರಿಸುವುದೇ ವಿಜಯನಾಮ ಸಂವತ್ಸರದ ವಿಶೇಷ. ಎಲ್ಲೆಲ್ಲೂ ವಿಜಯದ ಕಹಳೆ ಮೊಳಗುವುದೆಂಬ ಪೂರ್ಣ ವಿಶ್ವಾಸದಿಂದ ಎಲ್ಲರೂ ಸೇರಿ ಈ ಸಂವತ್ಸರವನ್ನು ಹೃತ್ಪೂರ್ವಕವಾಗಿ ಸ್ವಾಗತಿಸೋಣ.

ಯುಗಾದಿಯ ಪಾಡ್ಯ ದಿನದ ವಿಶೇಷ ಬೇವು–ಬೆಲ್ಲ ಸೇವನೆ. ಬೇಸಿಗೆ ಮತ್ತು ವಸಂತಮಾಸದ ಮೊದಲ ಹಬ್ಬ ಯುಗಾದಿ. ಬೇವು ತಿನ್ನುವುದರಿಂದ ರೋಗ ನಿರೋಧಕ ಶಕ್ತಿ ಬರುತ್ತದೆ. ಬೇಸಿಗೆಯಲ್ಲಿ ಬರಬಹುದಾದ ಯಾವುದೇ ರೋಗಕ್ಕೂ ಇದು ದಿವ್ಯೌಷಧ ಮತ್ತು ಬೆಲ್ಲವು ಸಿಹಿಯ ಜೊತೆಗೆ ಬಾಯಾರಿಕೆ ತಣಿಸುವ ಶಕ್ತಿಯನ್ನೂ ಹೊಂದಿದೆ. ಬೇವು ಕಹಿಯಾದರೂ ಷಡ್ರಸಗಳಲ್ಲಿ ಒಂದಾದ್ದರಿಂದ ಇದು ದೇಹಕ್ಕೆ ಅತ್ಯವಶ್ಯಕ.

ಬೇವು–ಬೆಲ್ಲವನ್ನು ಮಾರ್ಮಿಕವಾಗಿ ಗಮನಿಸಿದಾಗ ನಮ್ಮ ಜೀವನದಲ್ಲಿ ಬರಬಹುದಾದ ಸುಖ–ದುಃಖ, ನೋವು–ನಲಿವು, ಕಹಿ–ಸಿಹಿ ಪ್ರಸಂಗಗಳಿಗೆ ಪ್ರತೀಕವಾಗಿದೆ. ಯಾವುದೇ ಸಂದರ್ಭದಲ್ಲೂ ಹೆಚ್ಚು ಹಿಗ್ಗದೆ ಮತ್ತು ಅದೇ ರೀತಿ ಹೆಚ್ಚು ಕುಗ್ಗದೆ ಎಲ್ಲವನ್ನೂ ಸಮಪ್ರಮಾಣದಲ್ಲಿ ಯೋಗಭಾವದಿಂದ ಸ್ವೀಕರಿಸಬೇಕೆನ್ನುವುದನ್ನು ತೋರಿಸುತ್ತದೆ.

ವಸಂತಕಾಲದಲ್ಲೇ ಚಿಗುರುವ ಬೇವು ಆರೋಗ್ಯಕ್ಕೆ ಹೇಗೆ ಒಳ್ಳೆಯದೋ ಅದೇ ರೀತಿ ಅದರ ನೆರಳಿನಲ್ಲಿದ್ದು ಅದರ ಗಾಳಿ ಸೇವನೆಯೂ ಆಹ್ಲಾದದಾಯಕವಾದುದು.

ಯುಗಾದಿಯಂದು ಮನೆ ಬಾಗಿಲುಗಳಿಗೆ ಕಟ್ಟುವ ಮಾವಿನ ಎಲೆಯ ತೋರಣವೂ ಸಮೃದ್ಧಿಯ ಸಂಕೇತವಾಗಿದೆ. ಹಬ್ಬದ ದ್ಯೋತಕದೊಂದಿಗೆ ಮಾವಿನ ಎಲೆಗೂ ರೋಗ–ನಿರೋಧಕ ಶಕ್ತಿ ಇದೆ. ತೋರಣದ ಅಡಿ ನಡೆದಾಡುವವರನ್ನು ಸಾಂಕ್ರಾಮಿಕ ರೋಗದಿಂದ ಕಾಪಾಡುತ್ತದೆ.

ಹೊರಗೆ ತೋರಣವಾದರೆ ಒಳಗೆ ಹೂರಣದ ವಿಶೇಷ. ಹಬ್ಬದ ಸಮಯದಲ್ಲಿ ತಯಾರಿಸುವ ಒಬ್ಬಟ್ಟು ಬಾಯಿಗೆ ಸಿಹಿ, ಮನಸ್ಸಿಗೆ ಮುದ. ಕಾಯಿ ಒಬ್ಬಟ್ಟು, ಬೇಳೆ ಒಬ್ಬಟ್ಟು ಎಂದು ನಾನಾ ರೀತಿ ತಯಾರಿಸುತ್ತಾರೆ. ಇವುಗಳಿಗೆ ಉಪಯೋಗಿಸುವ ಸಾಮಗ್ರಿಗಳೂ ಮಿತಿಯಲ್ಲಿ ಸ್ವೀಕರಿಸಿದರೆ ಆರೋಗ್ಯಕ್ಕೆ ಒಳ್ಳೆಯದು.

ಇನ್ನು ಹಬ್ಬದ ದಿನ ತೊಡುವ ನವವಸ್ತ್ರಗಳು. ಇವೂ ಕೂಡ ಅಂದಿನ ಸಂತೋಷವನ್ನು ಹೆಚ್ಚಿಸುವಂತಹುದು.

ಇಂದಿನ ಗಗನಕ್ಕೇರುತ್ತಿರುವ ಬೆಲೆಗಳ ಸಮಯದಲ್ಲೂ ಪ್ರತಿಯೊಂದು ಸಂಸಾರವೂ ಬಿಡದೆ ನಮ್ಮ ಹಿಂದಿನವರು ಆಚರಿಸಿ, ಹೇಳಿಕೊಟ್ಟ ಹಬ್ಬದ ವಿಧಾನವನ್ನು ಬಿಡದೆ ಪಾಲಿಸುತ್ತಾ ಬರುತ್ತಿದೆ. ಮುಂದಿನ ಪೀಳಿಗೆಯವರು ಇದನ್ನು ಮುಂದುವರೆಸಲು ಸಹಕಾರಿ.

ಹೂರಣ, ತೋರಣ, ಒಬ್ಬಟ್ಟು, ಹೊಸಬಟ್ಟೆ, ಬಂಧು–ಮಿತ್ರರ ಸಮಾಗಮ ಬರೀ ಯುಗಾದಿಯ ದಿನಕ್ಕೆ ಮಾತ್ರ ಸೀಮಿತವಾಗದೆ ಅಂದಿನ ಸಂತೋಷ ವರ್ಷಪೂರ್ತಿ ತೊಡಗಲೆಂದು ಯುಗಾದಿಯ ಮುಂದಿನ ದಿನ ಬಿದಿಗೆ, ವರ್ಷ ತೊಡಕು ಹಬ್ಬ ಮಾಡುತ್ತಾರೆ. ಅದಾದ ನಂತರ ತದಿಗೆ ಗೌರಿಪೂಜೆ. ಆ ದಿನದಂದು ಗೌರಿಯನ್ನು ಅರಿಶಿನಗೌರಿ, ಕಲಶದ ಮೂಲಕ ಆಹ್ವಾನಿಸಿ ಬಹಳ ಶ್ರದ್ಧೆಭಕ್ತಿಯಿಂದ ಪೂಜಿಸುತ್ತಾರೆ. ಅಂದು ಬರುವ ಗೌರಿಗಾಗಿ ವಿಶೇಷವಾಗಿ ಮಾವಿನಕಾಯಿ ಚಿತ್ರಾನ್ನ, ಪಾಯಸ ನೈವೇದ್ಯದೊಂದಿಗೆ ಕೋಸಂಬರಿ, ಪಾನಕ ಮಾಡುತ್ತಾರೆ.

ವರ್ಷದ ಆದಿಯಲ್ಲಿ ಬರುವ ಈ ಮೂರು ಹಬ್ಬಗಳೂ ವರ್ಷಂಪೂರ್ತಿ ಎಲ್ಲರೂ ಸಂತೋಷವಾಗಿ ಇರಲೆಂದು ಮಾಡಿರುವ ಸಂಪ್ರದಾಯ. ನಾವುಗಳೂ ಇದನ್ನು ಆಚರಿಸಿ ಭಗವತ್ ಕೃಪೆಗೆ ಪಾತ್ರರಾಗೋಣ.



■ ಲಲಿತಾ ರಮೇಶ್

## ನಮ್ದ ವಾತೇಲೆ ಕಗ್ಗ

# ಪ್ರಪಂಚ್ತಿ ಪಳಪಿ ಮತನು

ಒರೆ ಆಕಾಶಮೆ ಪಾತ್ಕುಂಡು ಒರೆ ನೆಲಮೆ ತೊಚ್ಕುಂಡು
ಒರೆ ದಾನ್ಯಮೆ ತಿನ್ಕುಂಡು ಒರೆ ತಣ್ಣ್ಯು ಕುಡುಚಿ
ಒರೆ ಕಾತೆ ಉಸ್ರುಡುರ್ ಮಂಚರ್ದ್ದೆ ಜಾತೀಲೆ ಒಪ್ಡೆ
ವಂತು ಇಂದ್ ವೈಷಮ್ಯು? - ಮಂಕುತಿಮ್ಮ 14

ಪಳೆ ಬಕ್ತಿಶ್ರದ್ಗಿ ಪೋಯ್ಬದೆ ಮಾಸಿ
ಸುಳಿಂಜೇ ಇಲ್ಲೆ ಒದೊ ಪುದು ದರ್ಶನತಿ ಹೊಳಪು
ಪಳಗಿರ್ಕ್‌ರ್ ಹಾ ಉಳುಂದ್ ಕುಂಟು ಕುರುಡುಂದೆ ಚಾಲ್ಕ
ತಳಮಳೀಕಾನೆ ಅದೆ ಲೋಕು - ಮಂಕುತಿಮ್ಮ 15

ಪ್ರಪಂಚ್ಮೆ ಉಟ್ಟುಟ್ಟು ಇನ್ನೊಂಗ್ಯು ಪೋಗಾದ್ ಪ್ರೇತು
ಅಲೆಗ್ರಾಪ್ಡೆ ಪ್ರಪಂಚು ತಲ್ಲಣೀಚ್ ಪೋಯ್ಬದೆ ಇನ್ನಿಕಿ
ಪಳೇದರ್ಮು ಚತ್ತೇಯ್ನು ಪುದು ದರ್ಮು ಪರಂದಿಲ್ಲೆ
ತಳಮಳುತ್ಕು ಕೊನೆ ಒನ್ನಿಕಿ - ಮಂಕುತಿಮ್ಮ 16

ತಳಮಳು ಇದೋದು ಪ್ರಪಂಚುತ್ಕು ಸ್ವಾಮಿಗಿ ರಾಕ್ಷಸ್ರು ಮತೀಚ್ಕ
ಸಮುದ್ರುತ್ಲೆ ಆನಪ್ಡೆ ಅಮೃತುತ್ಕು ಪೀಟಿಕ್ಯಾ?
ವಿಷಮೆ ಕುಡಿಕಿರ್ ಈಶ್ವರು ಇರಂದಿರಂದ್ಕ ಇಂದ್
ಕಳವಳು ಒದಕಡಾ? - ಮಂಕುತಿಮ್ಮ 17

ನದೀ ಅಲೆಚಾಲ್ಕ ಉರುಳಿ ಹೊರಳಾನೆ ಅದೆ ಜೀವು
ಮೊದಲಿಲ್ಲೆ ಕೊನೆ ಇಲ್ಲೆ ನಿಲುವಿಲ್ಲೆ ಅದಕು
ಪಳಪೋದು ಚಾವು ಓದು ಅಮೃತು ಓದು ವಿಷು ಓದು?
ನೀರಿ ಗುಳ್ಳೆ ಎಲ್ಲ ! - ಮಂಕುತಿಮ್ಮ 18

*ಅನು: ಕೆ.ಎಸ್. ಮಧುಸೂದನ*



## ಮದುವೆಯ ಶುಭಾಶಯಗಳು

'ಬೃಹಚ್ಚರಣ' ಸಂಘದ ಸದಸ್ಯ ಶ್ರೀ ಎಸ್. ನಿರಂಜನ್ ಹಾಗೂ ಶ್ರೀಮತಿ ಕಸ್ತೂರಿ ನಿರಂಜನ್‌ರವರ ಪುತ್ರಿ ಚಿ॥ ಸೌ॥ ಎನ್. ಪದ್ಮಜರವರ ಕಲ್ಯಾಣ ಮಹೋತ್ಸವವು ಚಿ॥ ರಾ॥ ರವಿಕುಮಾರ್‌ರವರೊಂದಿಗೆ ದಿನಾಂಕ 15-2-2013 ರಂದು ಬೆಂಗಳೂರು ಚಾಮರಾಜಪೇಟೆಯ ಕಲ್ಯಾಣ ಮಂಟಪದಲ್ಲಿ ನೆರವೇರಿತು. ವಧು-ವರರಿಗೆ ಸಂಘದ ಶುಭಾಶಯಗಳು.

★ ★ ★

ಸಂಘದ ಹಿತೈಷಿ ಶ್ರೀ ಎಸ್.ಎಸ್. ಅಯ್ಯರ್ ಹಾಗೂ ಶ್ರೀಮತಿ ನಳಿನರವರ ಪುತ್ರ ಸಂಘದ ಸದಸ್ಯ ಚಿ॥ ರಾ॥ ಆತ್ರೇಶ ಹಾಗೂ ಚಿ॥ ಸೌ॥ ಅಕ್ಷತರವರ ವಿವಾಹವು 04-01-2013ರಂದು ಬಸವನಗುಡಿಯ ಕಲ್ಯಾಣ ಮಂಟಪದಲ್ಲಿ ನೆರವೇರಿತು. ನೂತನ ವಧು-ವರರಿಗೆ ಸಂಘವು ಶುಭ ಹಾರೈಸುತ್ತದೆ.

## ನಮ್ಮವರು



### ಹೆಚ್. ಕೃಷ್ಣಸ್ವಾಮಿ

**'ಬೃಹಚ್ಚರಣ'** ಸಮುದಾಯದ ಶ್ರೀ ಹೆಚ್. ಕೃಷ್ಣಸ್ವಾಮಿಯವರು ಆನೇಕಲ್ ತಾಲ್ಲೂಕು ಸರ್ಜಾಪುರದ ಶ್ರೀಮತಿ ಅಮ್ಮಯ್ಯಮ್ಮ ಮತ್ತು ಶ್ರೀ ಹೊಸಳ್ಳಿ ಶ್ರೀನಿವಾಸಯ್ಯನವರ ಸುಪುತ್ರರು.

25-4-1934ರಂದು ಜನಿಸಿದ ಶ್ರೀಯುತರು ಶಾಲಾ, ಕಾಲೇಜಿನಲ್ಲಿ ವಿದ್ಯಾಭ್ಯಾಸ ಮಾಡುತ್ತಿದ್ದ ಕಾಲದಿಂದಲೂ ಸಮಾಜ ಸೇವಾ ಕಾರ್ಯದಲ್ಲಿ ಆಸಕ್ತಿ ಹೊಂದಿದ್ದವರು. ವಾಣಿಜ್ಯ ಶಾಸ್ತ್ರದಲ್ಲಿ ಪದವೀಧರರಾದ ನಂತರ, ಕಾನೂನು ಶಾಸ್ತ್ರದಲ್ಲಿ ವ್ಯಾಸಂಗ ಮಾಡಿ, ಭಾರತೀಯ ಜೀವವಿಮಾ ನಿಗಮದ (L.I.C) ಅಧಿಕಾರಿಯಾಗಿ ಜೀವವಿಮಾ ತತ್ವವನ್ನು ಸಾರ್ವಜನಿಕರಿಗೆ ತಲುಪಿಸುವ ಕಾರ್ಯಪ್ರವೃತ್ತರಾಗಿದ್ದಾರೆ. ಜೀವವಿಮಾ ಅಖಿಲಭಾರತ ಪ್ರಾಂತೀಯ ಮತ್ತು ವಿಭಾಗೀಯ ಹಂತಗಳಲ್ಲಿ ಕಾರ್ಯ ಸಾಧನೆಯ ಹೊಸ ವಿಕ್ರಮಗಳನ್ನು ಸ್ಥಾಪಿಸಿದ್ದಾರೆ. ಅನೇಕ ಯುವಕರಿಗೆ ವೃತ್ತಿ ಜೀವನದ ಮಾರ್ಗವನ್ನು ತೋರಿ, ಬಲಿಷ್ಠ ವಿಶ್ವಾಸಾರ್ಹ ಪ್ರತಿನಿಧಿಗಳ ತಂಡ ಕಟ್ಟಿ, ಉನ್ನತ ಮಟ್ಟದ ಹೆಸರು ಪಡೆದಿರುತ್ತಾರೆ. ಈ ಸಾಧನೆಗೆ ಮೆಚ್ಚಿ ಬೆಳ್ಳಿಯ ಪಾರಿತೋಷಕದ ಜೊತೆಗೆ 'ಕೋಟಿಪತಿ' ಎಂಬ ಗೌರವವನ್ನು ವಿಮಾ ಸಂಸ್ಥೆಯು ಅನೇಕ ಬಾರಿ ನೀಡಿದೆ.

ತಮ್ಮ ಸೇವೆಯಿಂದ 1992ರಲ್ಲಿ ನಿವೃತ್ತಿಯ ನಂತರವೂ ಅತಿ ಹೆಚ್ಚಿನ ವಿಮಾ ವಹಿವಾಟನ್ನು ನಿರ್ವಹಿಸಿ, ಪ್ರತಿಷ್ಠೆಯಾಗಿರುವ 'ಛೇರ್‌ಮನ್ ಕ್ಲಬ್' ಸದಸ್ಯತ್ವವನ್ನು M.D.R.T. (ಅಮೆರಿಕ) ಪ್ರತಿನಿಧಿತ್ವವನ್ನು ಗಳಿಸಿದ್ದಾರೆ. ಚಿನ್ನದ ಪದಕಗಳ ಜೊತೆಗೆ 'ಏಜೆಂಟ್ ರತ್ನ' ಎಂಬ ಬಿರುದು ಸಹ ಸಂದಿದೆ.

ಬೃಹಚ್ಚರಣ ಸಂಘದ ಸ್ಥಾಪಕ ಸದಸ್ಯರೂ, ಪೋಷಕರೂ ಹಾಗೂ ಉಪಾಧ್ಯಕ್ಷರಾಗಿ ಸೇವೆ ಸಲ್ಲಿಸಿದ್ದು ಇಂದೂ ಕೂಡ ಸಂಘದ ಬೆಳವಣಿಗೆಗಾಗಿ ಜನಸಂಪರ್ಕ ಕಾರ್ಯದಲ್ಲಿ ನಮ್ಮ ಸಮುದಾಯದವರನ್ನು ಖುದ್ದಾಗಿ ಭೇಟಿಮಾಡಿ ಕಾರ್ಯ ಚಟುವಟಿಕೆಗಳನ್ನು ವಿವರಿಸಿ ಸಂಘಟಿಸುವ ಕಾರ್ಯವನ್ನು ಯಶಸ್ವಿಯಾಗಿ ನಿರ್ವಹಿಸುತ್ತಿದ್ದಾರೆ.

ಅನೇಕ ಸಂಘ ಸಂಸ್ಥೆಗಳ ಸಾರ್ವಜನಿಕ ಸೇವಾ ಕಾರ್ಯಗಳಲ್ಲಿ ತೊಡಗಿಸಿಕೊಂಡಿರುವ ಶ್ರೀಯುತರಿಗೆ ಸಂಘದ ಲೆಕ್ಕ ಪರಿಶೋಧಕರಾದ ಶ್ರೀ ಶಶಿಧರ್ ಸೇರಿ 2 ಗಂಡು ಮಕ್ಕಳು ಹಾಗೂ 3 ಹೆಣ್ಣುಮಕ್ಕಳು. ತುಂಬು ಸಂಸಾರದೊಂದಿಗೆ ಸಂತೋಷ ನೆಮ್ಮದಿಯೊಂದಿಗೆ 79 ವಸಂತಗಳನ್ನು ಕಂಡಿರುವ ಶ್ರೀಯುತರಿಗೆ ಬೃಹಚ್ಚರಣ ಸಂಘವು "ಹಿರಿಯ ಚೇತನ"ವೆಂಬ ಗೌರವ ನೀಡಿರುತ್ತೆ. ಭಗವಂತನು ಶ್ರೀ ಹೆಚ್. ಕೃಷ್ಣಸ್ವಾಮಿ ಹಾಗೂ ಅವರ ಕುಟುಂಬ ವರ್ಗಕ್ಕೆ ಸಮಸ್ತ ಸನ್ಮಂಗಳವನ್ನು ದಯಪಾಲಿಸಲಿ ಎಂದು 'ಬೃಹಚ್ಚರಣ' ಸಂಘವು ಹಾರೈಸುತ್ತದೆ.

# ಒದುಕೊ ಕಾಲು ಕೂಡಿ ವರೋಣು

ಪೆರಿಚರಣ ಅರ್ಥಾತ್ ಬೃಹಚ್ಚರಣದ ಜನರು ಹೇಳುತ್ತಿದ್ದ ಮಾತು. ಅನಾದಿ ಕಾಲದಿಂದಲೂ ಬಂದುದು. ಕಿತ್ತಿಗಾನಹಳ್ಳಿಯಲ್ಲಿದ್ದ ಸೂರಮ್ಮನವರು ಈ ಮಾತು ಸುಲಲಿತವಾಗಿ ಆಡುತ್ತಿದ್ದರು. ಯಾವುದೇ ಕೆಲಸವಾಗಲು ಈ ಮಾತು ಪೂರ್ವಿಕರಿಂದ ಲೀಲಾಜಾಲವಾಗಿ ಬರುತ್ತಿತ್ತು.

ಮಂಜಪುತ್ತೂರು ತಮಿಳುನಾಡಿನ ತಂಜಾವೂರು ಮತ್ತು ತಿರುವಾರೂರು ರಸ್ತೆಯಲ್ಲಿನ ಎಂಟನೆಯ ಮೈಲಿಕಲ್ಲಿನ ಹತ್ತಿರವಿದ್ದ ಒಂದು ಗ್ರಾಮ. ಬೃಹಚ್ಚರಣದ ಕುಟುಂಬಗಳು ಇಲ್ಲಿ ಮೂಲ ನೆಲೆಯಾಗಿದ್ದು ಪೌರೋಹಿತ್ಯದ ಕಾರ್ಯಕ್ಕಾಗಿ ಶಾಮಯ್ಯರ್ ಇಲ್ಲವೇ ಭಟ್ಟರ್ ತಮಿಳುನಾಡು ಮತ್ತು ಆನೇಕಲ್ ಬಳಿಯಿದ್ದ **ಗುಮ್ಮಳಾಪುರ**ದಲ್ಲಿ ವಲಸೆ ಬಂದ ಮೊದಲಿಗರು. ಇಂದು ವಿಶ್ವಾದ್ಯಂತ ಐದು ಸಾವಿರಕ್ಕೂ ಮಿಗಿಲಾಗಿ ಬೆಳೆದಿರುವ ಮೈಸೂರು ಬೃಹಚ್ಚರಣ ಮಿತ್ರವೃಂದ.

ಗುಂಜೂರಿನ ಲಾಯರ್ ವೆಂಕಟರಮಣಯ್ಯ ಮತ್ತು ಅಮ್ಮಣ್ಣಮ್ಮರವರದು ಈ ವೃಂದಕ್ಕೆ ಅಪೂರ್ವ ಕೊಡುಗೆ. ಸರ್ವಮಾನ್ಯ ಕಿತ್ತಿಗಾನಹಳ್ಳಿಯ ಶ್ರೀನಿವಾಸ ದೇವರ ದೇವಾಲಯ, ಅದಕ್ಕೆ ಪೂರಕವಾಗಿ ಗದ್ದೆ ಮತ್ತು ತೆಂಗಿನತೋಟ ದತ್ತಿಯಾಯಿತು. ಪೂಜಾ ಕೈಂಕರ್ಯಕ್ಕೆ ಉಪಾಧ್ಯಾಯರಾಗಿದ್ದ ಶಾಮಣ್ಣ ದೀಕ್ಷಿತರು ಟೊಂಕಕಟ್ಟಿ ನಿಂತರು. ತದನಂತರ ಕೌಂಡಿನ್ಯಸ ಗೋತ್ರದವರಾದ ಡಾ|| ಕೆ. ದಾನಪ್ಪ, ಪದ್ಮನಾಭರಾವ್, ಆನೇಕಲ್ ಹೆಡ್‌ಮಾಸ್ಟರ್ ಮತ್ತು ಶಿರಸ್ತೆದಾರರಾಗಿದ್ದ ಕೃಷ್ಣಮೂರ್ತಿದ್ವಯರು, ವಾಣಿ ಇನ್ಸ್‌ಸ್ಟಿಟ್ಯೂಟ್ ಶ್ರೀಕಂಠೇಶ್ವರಯ್ಯರ್ ಮುಂತಾದವರಿಂದ ಹಲವಾರು ನಾಗರ ಪ್ರತಿಷ್ಠೆ ಮತ್ತು ಕಟ್ಟೆ ನಿರ್ಮಾಣವಾಯಿತು. ಈ ಕೈಂಕರ್ಯದಲ್ಲಿ ಕಿತ್ತಿಗಾನಹಳ್ಳಿಯ ಏಳೆಂಟು ಕುಟುಂಬಗಳು; ಡಾ|| ಡಿ.ವಿ. ಗುಂಡಪ್ಪ, ಪ್ಲೀಡರ್ ಶ್ರೀನಿವಾಸಯ್ಯ, ಸರ್ಜಾಪುರದ ರಾಮೇಶ್ವರಯ್ಯ, ಲಕ್ಷ್ಮಣಯ್ಯರ್, ಸಬ್ ಜಸ್ಟೀಟ್ ಶ್ರೀನಿವಾಸ್‌ರವರು ಸೇವೆಯನ್ನು ನೀಡಿದರು. ಇನ್ನೂ ಹಲವಾರು ಪ್ರಮುಖರ ನಿಸ್ವಾರ್ಥ ಕಾರ್ಯತತ್ಪರತೆ ಈ ಕ್ಷೇತ್ರ ಬೆಳವಣಿಗೆಗೆ ಸಾಧ್ಯವೆನಿಸಿದೆ.

ಅನುಗಾಲದಿಂದ ಪ್ರತಿ ಫಲ್ಗುಣಮಾಸದ ಪಂಚಮಿ, ಷಷ್ಠಿ, ಸಪ್ತಮಿಗಳಲ್ಲಿ ನಾಗಾರಾಧನೆ, ಶ್ರೀನಿವಾಸ ಕಲ್ಯಾಣ ಮತ್ತು ರಥೋತ್ಸವ, ದೇವರುಗಳ ಮುತ್ತಿನ ಪಲ್ಲಕ್ಕಿ, ಪೂರ್ವದಲ್ಲಿ ಸ್ನೇಹ, ಭಕ್ತಿಗಳಿಂದ ಜನರಿಂದಲೇ ತಾನೇ ತಾನಾಗಿ ನಡೆದುಬಂದಿತು. ಮಂಜಪುತ್ತೂರು ಬೃಹಚ್ಚರಣ ಸಂಘವು ಶ್ರೀಯುತ ಪಟ್ಟಾಭಿರಾಮಯ್ಯ ಮತ್ತು ಮೇಷ್ಟ್ರು ಶ್ರೀನಿವಾಸಯ್ಯನವರ ಮುಂದಾಳುತನದಲ್ಲಿ ಇಪ್ಪತ್ತೈದು ವರುಷ ನಡೆಯಿತು. ಇದೀಗ ಯುವ ಪ್ರತಿಭೆಗಳಾದ ಶ್ರೀ ಸೋಮಸುಂದರ್ ಮತ್ತು ವಿ.ಎಸ್. ಮಣಿಯವರ ನೇತೃತ್ವದಲ್ಲಿ ಪ್ರಗತಿ ಸಾಧಿಸುತ್ತಿದೆ.

ಲಾಯರ್ ವೆಂಕಟರಮಣಯ್ಯ ಮತ್ತು ಅಮ್ಮಣ್ಣಮ್ಮರವರು ಬೆಂಗಳೂರಿನಲ್ಲಿ ನಗರ್ತಪೇಟೆಯ ಒಂದು ಮನೆಯಲ್ಲಿ ಉಚಿತ ವಿದ್ಯಾರ್ಥಿ ನಿಲಯವನ್ನು ಸ್ಥಾಪಿಸಿ ಹಲವಾರು ಬಡಬ್ರಾಹ್ಮಣ ವಿದ್ಯಾರ್ಥಿಗಳ ಪುರೋಭಿವೃದ್ಧಿಗೆ ಕಾರಣವಾಗಿರುವುದು ಬೃಹಚ್ಚರಣ ವೃಂದದ ಸಾಮಾಜಿಕ ಸೇವೆಯ ಒಂದು ಹಿನ್ನೋಟ. ಹಲವು ವಿದ್ಯಾರ್ಥಿಗಳು ಈ ಸೇವೆಯನ್ನು ಸ್ಮರಿಸುತ್ತಾರೆ.

ಸವಲತ್ತು ಇಲ್ಲ ಸರ್ವಮಾನ್ಯ ಕಿತ್ತಿಗಾನಹಳ್ಳಿಯಲ್ಲಿ ನಾಗಾರಾಧನೆಗೆ ಸುತ್ತಮುತ್ತಲಿನ ಜನ ಹಳ್ಳಿಗಳಿಂದ ಎತ್ತಿನಗಾಡಿಯಲ್ಲಿ ಬರುತ್ತಿದ್ದುದ್ದು, ಸುತ್ತಲಿನ ತೋಟದ ಬಾವಿಗಳಿಂದ ಅಡಿಗೆಗೆ ನೀರು, ಕೈತೊಳೆಯಲು ದೇವಾಲಯದ ಮುಂದೆ ತೆಂಗಿನತೋಟದ ನಡುವೆ ಸೃಷ್ಟಿಸಿದ ಕಲ್ಯಾಣಿ ಅದಕ್ಕೆ ಹೊರಗಿನಿಂದ ನೀರು ಪೂರೈಕೆ, ಚಪ್ಪಡಿಕಲ್ಲುಗಳಿಂದ ಕಟ್ಟಿದ ಒಂದು ಹಜಾರ. ಇವು ನಾಗಾರಾಧನೆಗೆ ಇದ್ದ ಅನುಕೂಲಗಳು.

ನಾಗಾರಾಧನೆಯಂದು ಕೌಂಡಿನ್ಯ ಗೋತ್ರದವರಿಂದ ಕೊಡುಗೆಯಾದ ಅರವಟಿಗೆ ನೀಡುಗೆ, ಕೋಸಂಬರಿ, ಹುಳಿಯವಲಕ್ಕಿ, ರಸಾಯನ, ಪಾನಕ, ನೀರುಮಜ್ಜಿಗೆಯ ವಿತರಣೆ ಒಂದು ಸಂಪ್ರದಾಯವಾಗಿಸಿದೆ. ಇದೀಗ ಈ ಸೇವೆ ಅಜ್ಜನೆಟ್ಟ ಆಲದಮರದಂತೆ ಎಂದಿಗೂ ಸತತ, ನಿರಂತರ.

ಬೆಂಗಳೂರಿನಿಂದ ಈ ಕ್ಷೇತ್ರಕ್ಕೆ ಬರಲು ಖಾಸಗಿ ಬಸ್ಸುಗಳಾದ ಅಮೀರ್, ಗಿರಿಜಾಶಂಕರ, ರಂಗವಿಲಾಸ, ಎನ್.ಎಸ್. ವಾಹನಗಳು ಇಂದಿನವರಿಗೆ ಪಳೆಯುಳಿಕೆ. ಒಬ್ಬರ ಮೇಲೆ ಮತ್ತೊಬ್ಬರು ಕುಳಿತು ಹದಿನೈದು ಮೈಲಿಗಳ ಪ್ರಯಾಣ ಸುಸ್ತೋಸುಸ್ತು. ಇಲ್ಲಿ ತಂಗಲು, ದಿನಗಳೆಯಲು ಕಿತ್ತಿಗಾನಹಳ್ಳಿಯ ಏಳೆಂಟು ಬೃಹಚ್ಚರಣ ಕುಟುಂಬಗಳ ಬಾಗಿಲು ಸದಾ ತೆರೆದಿರುತ್ತಿತ್ತು. ಸಂಜೆ ಮತ್ತು ರಾತ್ರಿ ವೇಳೆಯಲ್ಲಿ ಇಪ್ಪತೆಂಟನಾಡುತ್ತಾ ಇಪ್ಪತೆಂಟಾಡುವುದು ಸಹ ಪದ್ಧತಿಯಲ್ಲಿ ಸೇರಿಹೋಗಿದೆ.

ಈ ನಾಗಾರಾಧನೆಯಲ್ಲಿ ವಧೂವರರ ಅನ್ವೇಷಣೆಯು ಸಹ ನಡೆದು ಬಿಡುವುದು ಇತ್ತು. ಪೂರ್ವಭಾವಿ ಮಾತುಕತೆಗೆ, ಸಂಬಂಧಗಳ' ಬೆಸುಗೆ. ಶ್ರೀನಿವಾಸ ಕಲ್ಯಾಣದ ಜೊತೆಗೆ ವಧೂವರಗಳ ಕಲ್ಯಾಣಗಳು ನಡೆದಿರುವ ದೃಷ್ಟಾಂತಗಳಿವೆ.

ಮೇಲಿನ ನೆನಪುಗಳ ಮೆಲುಕುಗಳೊಂದಿಗೆ ಇಂದಿನ ಯುವಕ ಸಂಘಟಕರ ಹಲವಾರು ಸುರಸುಂದರ ಯೋಜನೆಗಳು ನಿರಾತಂಕವಾಗಿ ಸಾಗಲೆಂಬುದೇ ಈ ಬರಹಗಾರನ ಹಾರೈಕೆ.

■ ಜಿ.ಎಸ್. ಸತ್ಯಮೂರ್ತಿ



## ಎಸ್.ಶಿವರಾಂ ಅವರಿಗೆ ರಾಷ್ಟ್ರೀಯ ಪ್ರಶಸ್ತಿ



**'ಬೃಹಚ್ಚರಣ'** ಸಮುದಾಯದ ಹಿರಿಯ ಸದಸ್ಯರೂ, ಸಂಘದ ಹಿತೈಷಿಗಳೂ, ಮುನ್ನೂರಕ್ಕೂ ಹೆಚ್ಚು ಚಿತ್ರಗಳಲ್ಲಿ ನಟಿಸಿರುವ ಕನ್ನಡದ ಮೇರುನಟ, ನಿರ್ಮಾಪಕ, ಚಿತ್ರರಂಗದ ಕಾರ್ಮಿಕರ ಹಿತೈಷಿ **ಶ್ರೀ ಎಸ್. ಶಿವರಾಂ** ಅವರಿಗೆ 2013ರ **'ಡಾ. ಬಿ. ಸರೋಜದೇವಿರವರ ರಾಷ್ಟ್ರೀಯ ಪ್ರಶಸ್ತಿ'**ಯು ದಿನಾಂಕ 3-3-2013ರಂದು ಸಂದಿರುವುದಕ್ಕೆ ಸಂಘವು ಸಂತೋಷ ವ್ಯಕ್ತಪಡಿಸುತ್ತಾ, ಅವರ ಸಾಧನೆಯನ್ನು ಇನ್ನೂ ಹಲವಾರು ರಾಷ್ಟ್ರೀಯ ಹಾಗೂ ಅಂತರ ರಾಷ್ಟ್ರೀಯ ಸಂಸ್ಥೆಗಳು ಗುರುತಿಸುವಂತಾಗಲೆಂದು ಹಾರೈಸುತ್ತದೆ.



# ಆರ್.ಜಿ. ವಿಜಯಸಾರಥಿ

ಇತ್ತೀಚೆಗೆ ನಮ್ಮನಗಲಿದ **ಆರ್.ಜಿ. ವಿಜಯಸಾರಥಿ** ಬಹುಮುಖ ಪ್ರತಿಭಾವಂತರಾಗಿದ್ದರು. ಬ್ಯಾಂಕಿಂಗ್, ಸಿನಿಮಾ, ಕ್ರೀಡೆ, ಆರ್ಥಿಕ ವಲಯಗಳಲ್ಲಿ ತಮ್ಮ ಖಚಿತ ನಿಲುವನ್ನು ಪ್ರತಿಪಾದಿಸುತ್ತಿದ್ದರು. ಅವರು ಬ್ಯಾಂಕ್ ಉದ್ಯೋಗಿಯಾಗಿದ್ದರೂ ಪ್ರವೃತ್ತಿಯಿಂದ ಬರವಣಿಗೆಯನ್ನು ರೂಢಿಸಿಕೊಂಡಿದ್ದರು. ಸಿನಿಮಾ ಮತ್ತು ಕ್ರೀಡೆ ಅವರ ಮೆಚ್ಚಿನ ವಿಷಯಗಳಾಗಿತ್ತು. ನನ್ನ ಅವರ ಸ್ನೇಹ ಮೂವತ್ತು ವರ್ಷಗಳಷ್ಟು ಹಳೆಯದು. ಪ್ರಜಾಮತ, ಅರಗಿಣಿ, ಮಂಗಳ ನಿಯತಕಾಲಿಕೆಗಳಲ್ಲಿ ನಾನು ಪತ್ರಕರ್ತನಾಗಿದ್ದಾಗ ವಿಜಯಸಾರಥಿ ಕ್ರೀಡೆ, ಸಿನಿಮಾ ಬರಹಗಳ ಅಂಕಣಕಾರರಾಗಿದ್ದರು. ಅವರ ಸರಳಶೈಲಿಯ ಬರವಣಿಗೆ, ವಸ್ತುನಿಷ್ಠ ನಿರೂಪಣೆ, ಮುಖಸ್ತುತಿ ನಿಂದಾಸ್ತುತಿಗಳಿಂದ ಹೊರತಾಗಿತ್ತು. ಕನ್ನಡ–ಇಂಗ್ಲಿಷ್ ಎರಡೂ ಭಾಷೆಗಳಲ್ಲೂ ಅವರು ಸಮರ್ಥವಾಗಿ ಬರೆಯಬಲ್ಲವರಾಗಿದ್ದರು. ಪತ್ರಿಕೆಗಳಿಗಿದ್ದ 'ಡೆಡ್‌ಲೈನ್' ಮನಗಂಡಿದ್ದ ವಿಜಯಸಾರಥಿ ತಮ್ಮ ಅಂಕಣ ಬರಹವನ್ನು ನಿರ್ದಿಷ್ಟ ಸಮಯಕ್ಕೆ ಪತ್ರಿಕೆಗೆ ತಲುಪಿಸುತ್ತಿದ್ದರು. ಕೆಲವೊಮ್ಮೆ ಪತ್ರಿಕಾ ಕಚೇರಿಯಲ್ಲಿಯೇ ಕುಳಿತು ಬರೆದದ್ದುಂಟು. ತನ್ನಿಂದ ತೊಂದರೆಯಾಗಬಾರದೆಂಬ ಕಾಳಜಿ ಅವರದು.

ವಿಜಯಸಾರಥಿಯ ಸ್ನೇಹವಲಯ ದೊಡ್ಡದು. ಎಲ್ಲ ವರ್ಗದ ಜನರೊಡನೆ ಬೆರೆಯುತ್ತಿದ್ದರು. ಅವರು ಎಲ್ಲ ವಿಷಯಗಳ ಬಗ್ಗೆಯೂ ಮಾತನಾಡಬಲ್ಲವರಾಗಿದ್ದರು. ವಿವಿಧ ಕ್ರೀಡೆಗಳನ್ನು ಕುರಿತು ಅಧ್ಯಯನ ನಡೆಸಿ ಕರಾರುವಾಕ್ಕಾಗಿ ಮಾತನಾಡುತ್ತಿದ್ದರು. ಅವರು ಪೂರ್ಣಪ್ರಮಾಣದಲ್ಲಿ ಬರಹಗಾರರಾಗ ಬಯಸಿ ಬ್ಯಾಂಕಿನಿಂದ ಸ್ವಯಂನಿವೃತ್ತಿ ಪಡೆದರು. ಆಗ ಆಪ್ತವಲಯದ ಟೀಕೆಗೂ ಗುರಿಯಾದರು. ಸಿನಿಮಾರಂಗದ ಎಲ್ಲ ವಿಭಾಗದವರೂ ವಿಜಯಸಾರಥಿಯ ಸ್ನೇಹಿತರು. ನ್ಯಾಷನಲ್ ಹೈಸ್ಕೂಲಿನಲ್ಲಿ ವಿಷ್ಣುವರ್ಧನ್ ಸಹಪಾಠಿಯಾಗಿದ್ದ ವಿಜಯಸಾರಥಿ ವಿಷ್ಣು ಬಗ್ಗೆ ವಿಶೇಷ ಪ್ರೀತಿ ಹೊಂದಿದ್ದರು. ಸಿನಿಮಾ ಕಲಾವಿದರೊಂದಿಗೆ ಅವರದು ನಿಕಟ ಸ್ನೇಹ. ಅನೇಕ ಕಲಾವಿದರು ವಿಜಯಸಾರಥಿಯೊಂದಿಗೆ ಚಿತ್ರೋದ್ಯಮಕ್ಕೆ ಸಂಬಂಧಪಟ್ಟಂತೆ ವಿಚಾರ ವಿನಿಮಯ ನಡೆಸಿದ್ದುಂಟು.

ಬನಶಂಕರಿಯ ಮನೆಯೊಂದರಲ್ಲಿ ವಿಷ್ಣುವರ್ಧನ್ ಅಭಿನಯದ ಚಿತ್ರವೊಂದರ ಚಿತ್ರೀಕರಣ ನಡೆಯುತ್ತಿತ್ತು. ಆ ಚಿತ್ರದ ಬಗ್ಗೆ ವರದಿ ಮಾಡಲು ನಾನು, ಸಹ ಪತ್ರಕರ್ತ ರಾಮಚಂದ್ರ, ವಿಜಯಸಾರಥಿ ಹೋಗಿದ್ದೆವು. ಮಧ್ಯಾಹ್ನ ವಿಷ್ಣು ನಮ್ಮನ್ನು ಅವರ ಮನೆಗೆ ಊಟಕ್ಕೆ ಕರೆದುಕೊಂಡು ಹೋಗಿದ್ದರು. ಊಟದ ಸಮಯದಲ್ಲಿ ವಿಷ್ಣು–ವಿಜಯಸಾರಥಿ ಮಾತನಾಡಿದ್ದು ಸಿನಿಮಾ ವಿಷಯವಲ್ಲ, ಕ್ರೀಡೆಯ ಬಗ್ಗೆ. ವಿಜಯಸಾರಥಿಯ ಅಪಾರ ನೆನಪಿನ ಶಕ್ತಿಯ ಬಗ್ಗೆ ಮೆಚ್ಚುಗೆ ಸೂಚಿಸಿದ ವಿಷ್ಣು. "ಏನೋ ಎಷ್ಟೊಂದು ವಿಷಯ ತಿಳಿದುಕೊಂಡಿದ್ದೀಯಾ ನೀನು" ಎಂದು ಬೆನ್ನು ತಟ್ಟಿದ್ದು ನನ್ನ ಕಣ್ಣಿಗೆ ಕಟ್ಟಿದಂತಿದೆ. ವಿಜಯಸಾರಥಿ ಕ್ರೀಡಾಪಟುಗಳ, ಸಿನಿಮಾ ಕಲಾವಿದರ ಸಂಪೂರ್ಣ ಜಾತಕವನ್ನು ತಿಳಿದವರಾಗಿದ್ದರು.

ಮಾತು, ಬರವಣಿಗೆ ವಿಜಯಸಾರಥಿ ಬಂಡವಾಳ. ಎಂಥವರನ್ನೂ ತಮ್ಮ ಮಾತಿನ ಮೋಡಿಗೆ ಸಿಲುಕಿಸುತ್ತಿದ್ದರು. ತೆರೆಯ ಮೇಲೆ ಕಾಣಿಸಿಕೊಳ್ಳಬೇಕೆಂಬ ಅವರ ಆಸೆಯೂ ಈಡೇರಿತು. ಅನೇಕ ಚಿತ್ರಗಳಲ್ಲಿ ವಿಜಯಸಾರಥಿ ವೈವಿಧ್ಯಮಯ ಪಾತ್ರಗಳನ್ನು ನಿರ್ವಹಿಸಿದ್ದಾರೆ. ಅವರಲ್ಲೊಬ್ಬ ಕಲಾವಿದನಿದ್ದಾನೆ ಎಂಬುದನ್ನು ನಿರೂಪಿಸಿದ್ದಾರೆ.

ಬಹಳ ವರ್ಷಗಳ ನಂತರ ಭೇಟಿಯಾದ ನಟ ರವಿಚಂದ್ರನ್ ಜತೆ ಲೋಕಾಭಿರಾಮವಾಗಿ ಮಾತನಾಡುವಾಗ 'ವಿಜಯಸಾರಥಿ ಹೇಗಿದ್ದಾನೆ' ಎಂದು ಕೇಳಿದರು. 'ನಾನವರನ್ನು ನೋಡಿ ಬಹಳ ದಿನಗಳೇ ಆಯಿತು' ಎಂದೆ. ಆಗ ನನಗೆ ತಿಳಿಯಿತು ಅವರು ಅನಾರೋಗ್ಯದಿಂದ ಬಳಲುತ್ತಿದ್ದಾರೆಂದು. ಕೆಲವೇ ದಿನಗಳಲ್ಲಿ ವಿಜಯಸಾರಥಿ ನಮ್ಮನ್ನಗಲಿದರು. ಅವರದು ಸಂತೃಪ್ತ ಜೀವನ. ಊಟ–ತಿಂಡಿಗಳು ರುಚಿಯಾಗಿರಬೇಕು. ನಾಲಿಗೆಗೆಂದೂ ಅವರು ಮೋಸ ಮಾಡುತ್ತಿರಲಿಲ್ಲ. ಅವರಲ್ಲಿ ರುಚಿ–ಅಭಿರುಚಿಗಳೆರಡೂ ಸಮಾನವಾಗಿದ್ದವು.

ತಮ್ಮ ಅರವತ್ತೆರಡನೆಯ ವಯಸ್ಸಿನಲ್ಲಿ ವಿಜಯಸಾರಥಿ ಸಾವಿಗೆ ಶರಣಾದರು. ಅದು ಸಾಯುವ ವಯಸ್ಸೇನಲ್ಲ, ಆದರೆ ಸಾವಿಗೆ....?



■ **ವೈ.ಜಿ. ಗಿರಿಶಾಸ್ತ್ರಿ**

## ಶ್ರದ್ಧಾಂಜಲಿ

**ಶ್ರೀಮತಿ ರಾಜಲಕ್ಷ್ಮಿ ಕೃಷ್ಣಮೂರ್ತಿ**
**ಶ್ರೀಮತಿ ಮಂಗಳ ದೇವರಾಜ್**
**ಶ್ರೀ ಆರ್.ಜಿ. ವಿಜಯಸಾರಥಿ**
**ಶ್ರೀ ಕೆ.ಟಿ. ಹನುಮಂತನ್**

### ಶ್ರೀಮತಿ ಸಾವಿತ್ರಿ ಶ್ರೀಕಂಠಯ್ಯ

ಪತ್ರಿಕೆಗಳಲ್ಲಿ ಮಹಿಳೆಯರಿಗೆ ಉಪಯುಕ್ತ ಲೇಖನಗಳನ್ನು ಬರೆಯುತ್ತಿದ್ದ ಶ್ರೀಮತಿ ಸಾವಿತ್ರಿ ಶ್ರೀಕಂಠಯ್ಯ ಮಾರ್ಚ್ 18ರಂದು ನಿಧನರಾದರು. ಅವರಿಗೆ 89 ವರ್ಷಗಳಾಗಿತ್ತು. ಗೃಹ ಕೃತ್ಯದ ಜೊತೆಗೆ ಬರವಣಿಗೆಯನ್ನು ಹವ್ಯಾಸವಾಗಿರಿಸಿ ಕೊಂಡಿದ್ದ ಸಾವಿತ್ರಿಯವರು 'ಬೃಹಚ್ಚರಣ' ವಿಶೇಷ ಸಂಚಿಕೆಯಲ್ಲಿ ಹಬ್ಬಗಳು–ಸಂಸ್ಕೃತಿ ಬಳುವಳಿ ಲೇಖನ ಬರೆದಿದ್ದಾರೆ. ದಿವಂಗತರು ಮೂವರ ಸೋದರರು, ಓರ್ವ ಸೋದರಿ, ಅಪಾರ ಬಂಧುಗಳನ್ನು ಅಗಲಿದ್ದಾರೆ.

ಇವರಿಗೆ 'ಬೃಹಚ್ಚರಣ'ದ ಶ್ರದ್ಧಾಂಜಲಿ.

## ಸಂಘಕ್ಕೆ ಹೊಸ ಸದಸ್ಯರು

**ಶ್ರೀ ಸೂರ್ಯನಾರಾಯಣ, ನೆಲಮಂಗಲ**
**ಶ್ರೀ ಬಿ. ಶೇಷಾಚಲ, ಕೋರಮಂಗಲ**
**ಶ್ರೀಮತಿ ಸಂಧ್ಯಾ, ಜಯನಗರ**

## ಆರ್.ಜಿ. ವಿಜಯಸಾರಥಿ : ವರ್ಣರಂಜಿತ ವ್ಯಕ್ತಿತ್ವ

ಈ ವ್ಯಕ್ತಿ ಇನ್ನಿಲ್ಲ. ಆದರೆ ಇದ್ದ 62 ವರ್ಷಗಳಲ್ಲಿ ಜೀವನವನ್ನು ಚೆನ್ನಾಗಿ ಅನುಭವಿಸಿ, ಅನೇಕ ಸಾಧನೆಗಳನ್ನು ಮಾಡಿ, ಇತರರಿಗೆ ಮಾರ್ಗದರ್ಶಿಯಾಗಿ, ಒಳ್ಳೆ ಸ್ನೇಹಿತನಾಗಿ, ಒಳ್ಳೆ ಬಂಧುವಾಗಿ, ಒಳ್ಳೆ ಸಮಾಜಚಿಂತಕರಾಗಿ, ಕ್ರೀಡೆ ಮತ್ತು ಚಲನಚಿತ್ರ ಜಗತ್ತಿನ ಒಳ್ಳೆ ವಿಮರ್ಶಕರಾಗಿ ಗುರಿಮುಟ್ಟಿ ಕೆಲಸ ನಿರ್ವಹಿಸಿರುತ್ತಾರೆ.

ಇವರು ಹೊಂದಿದ್ದ ಜೀವನೋತ್ಸಾಹ, ಎಲ್ಲ ರಂಗಗಳಲ್ಲಿಯೂ ತಿಳಿದುಕೊಳ್ಳಬೇಕೆಂಬ ಹಂಬಲ, ಇಂದಿನ ಯುವಕರನ್ನು ನಾಚಿಸುವಂತಿತ್ತು. ಇವರಲ್ಲಿದ್ದ ಪ್ರಮುಖ ಗುಣ ಎಂದರೆ, ಸಮಾಜದ ಎಷ್ಟೇ ದೊಡ್ಡ ಸ್ಥಾನಗಳನ್ನು ಅಲಂಕರಿಸಿದ್ದ ವ್ಯಕ್ತಿಗಳನ್ನೂ ನಿರ್ಭಯವಾಗಿ ಸಂದರ್ಶನ ಮಾಡುತ್ತಿದ್ದುದು ಹಾಗೂ ಸಂದರ್ಶನಕ್ಕೆ ಮುಂಚೆ ಆ ವ್ಯಕ್ತಿಯ ಬಗ್ಗೆ ಕಲೆಹಾಕುತ್ತಿದ್ದ ಮಾಹಿತಿಗಳು.

ಜೀವನವನ್ನು ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದಲ್ಲಿ ಆರಂಭಿಸಿ 20 ವರ್ಷಗಳ ಸೇವೆನಂತರ ಸ್ವಯಂ ನಿವೃತ್ತಿ ಹೊಂದಿ, ಜತೆಜತೆಗೆ ಪತ್ರಿಕೆಗಳಲ್ಲಿ ಕ್ರಿಕೆಟ್ ಬಗ್ಗೆ ಅಂಕಣಗಳನ್ನು ಬರೆಯುತ್ತಾ, ಸಿನಿಮಾರಂಗದಲ್ಲಿ ಆಸಕ್ತಿವಹಿಸಿ, ಚಲನಚಿತ್ರ ವಿಮರ್ಶಕರಾದರು. ಸಿನಿಮಾರಂಗದಲ್ಲಿ ಇವರನ್ನು Encyclopedia ಎಂದೇ ಕರೆಯುತ್ತಿದ್ದರು. ದಿ॥ ವಿಷ್ಣುವರ್ಧನ ಅವರ ಸಹಪಾಠಿಗಳಾಗಿದ್ದು, ಅವರ ಕುಟುಂಬದ ಸದಸ್ಯರೇ ಆಗಿದ್ದರು. ಚಲನಚಿತ್ರರಂಗದಲ್ಲಿ ಅವರಿಗೆ ಗೊತ್ತಿಲ್ಲದ ನಟರು, ನಿರ್ದೇಶಕರುಗಳು, ನಿರ್ಮಾಪಕರು ತಾಂತ್ರಿಕಜ್ಞರೂ ಇರಲೇ ಇಲ್ಲ. ಜೀವನದ ಪ್ರತಿಕ್ಷಣವನ್ನು ಅನುಭವಿಸುತ್ತಿದ್ದರು. ಒಳ್ಳೆ ಸಂಘಜೀವಿ, ಯಾವಾಗಲೂ ಸ್ನೇಹಿತರ ಮಧ್ಯೆ ತಮಾಷೆಯಿಂದ ಕಾಲ ಕಳೆಯುತ್ತಿದ್ದರು.

ಬಡವರು, ಜ್ಞಾನಿಗಳು, ವೃದ್ಧರನ್ನು ಕಂಡರೆ ಅಪಾರ ಗೌರವ. ಕೆಳವರ್ಗದವರನ್ನು ಕಂಡರೆ ಅನುಕಂಪ, ಜತೆಗೆ ತನ್ನ ಕೈಲಾದಷ್ಟು ಆರ್ಥಿಕ ಸಹಾಯ ಮಾಡುತ್ತಿದ್ದರು. ಮಠ, ದೇವಸ್ಥಾನಗಳ ಬಗ್ಗೆ ಅಪಾರ ನಂಬಿಕೆ, ಗೌರವ. ಅಪಾರ ದೈವಭಕ್ತ, ತೀರ್ಥಯಾತ್ರೆ, ಕ್ಷೇತ್ರದರ್ಶನ ಬಂಧುಗಳು ಮತ್ತು ಸ್ನೇಹಿತರೊಡನೆ ತಮಾಷೆಯಾಗಿ ಕಾಲ ಕಳೆಯುವುದು.

ಇಂಗ್ಲಿಷ್‌ನ ನಾಣ್ಣುಡಿಯಂತೆ "Every adult has a child in his Heart, never kill it" ಎನ್ನುವ ಹಾಗೆ ಜೀವನದುದ್ದಕ್ಕೂ ಹುಡುಗಾಟಿಕೆಯನ್ನು ಉಳಿಸಿಕೊಂಡು, ಜೀವನವನ್ನು ಸವಿದು ಉಪಕಾರಿಯಾಗಿ ಉತ್ಸಾಹದ ಚಿಲುಮೆಯಾಗಿ ಜೀವನವನ್ನು ಸಾಗಿಸಿ ಫೆಬ್ರವರಿ 24ರಂದು ಸಾವನ್ನಪ್ಪಿದರು. ಇವರ ಆತ್ಮಕ್ಕೆ ಶಾಂತಿ ದೊರಕಲಿ.



■ ಆರ್.ಎನ್. ವೆಂಕಟಸುಬ್ಬರಾವ್

ನಂಬದಿರ್ದನು ತಂದೆ ನಂಬಿದನು ಪ್ರಹ್ಲಾದ
ನಂಬಿಯೂ ನಂಬದಿರುವಿಬ್ಬಂದಿ ನೀನು
ಕಂಬದಿನೊ ಬಿಂಬದಿನೊ ಮೋಕ್ಷವವರಿಂಗಾಯ್ತು
ಸಿಂಬಳದಿ ನೊಣ ನೀನು - ಮಂಕುತಿಮ್ಮ

## "ಆಧಾರ್ ಕಾರ್ಡ್" : ನನ್ನ ಅನುಭವ

ಆಧಾರ್ ಕಾರ್ಡ್ ಪಡೆಯಲು ನನಗಾದ ಅನುಭವವನ್ನು ಈ ಲೇಖನದ ಮೂಲಕ ತಿಳಿಯಪಡಿಸುತ್ತೇನೆ. ನಾನು ಒಂದು ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತೇನೆ. ಪ್ರತಿದಿನ 2 ಮತ್ತು 3 ಗಂಟೆಗಳ ಅನುಮತಿ ಪಡೆದು ಕ್ಯೂ ನಿಂತು ಕೆಲಸವಾಗದೆ ಹಿಂದಿರುಗುತ್ತಿದ್ದೆ. ಕಡೆಗೆ ಒಂದು ಭಾನುವಾರ ಕಚೇರಿಗೆ ರಜವಾಗಿದ್ದರಿಂದ ಈ ಕೆಲಸವನ್ನು ಮಾಡಲೇಬೇಕೆಂದು ನಿರ್ಧರಿಸಿದೆ. ನಾನು ಹಾಗೂ ನನ್ನ ಗೆಳತಿ ಬೆಳಗ್ಗೆ 7 ಗಂಟೆಗೆ ಎಲ್ಲಾ ದಾಖಲೆಗಳೊಂದಿಗೆ ಕ್ಯೂನಲ್ಲಿ ನಿಂತೆವು. ಅಷ್ಟು ಹೊತ್ತಿಗಾಗಲೇ 40 ಜನರು ಜಮಾಯಿಸಿದ್ದರು. ಅಂದು ಭಾನುವಾರವಾದರೂ ಅಲ್ಲಿನ ಕಚೇರಿಯ ಸಿಬ್ಬಂದಿ ಸರಿಯಾಗಿ 9 ಗಂಟೆಗೆ ಕೆಲಸ ಪ್ರಾರಂಭ ಮಾಡಿದರು. ನಮ್ಮ ಕ್ಯೂ ನಂಬರಿನ ಸಂಖ್ಯೆ ಅರವತ್ತಾಗಿತ್ತು. ಹೇಗೆಂದರೆ ಒಂದು ಕುಟುಂಬದಿಂದ, ಒಬ್ಬರು ಸಾಲಿನಲ್ಲಿ ನಿಲ್ಲುತ್ತಿದ್ದರು, ನಂತರ ಇತರ ಸದಸ್ಯರು ಬಂದು ಸೇರುತ್ತಿದ್ದರು. ಈ ಸಾಲಿನಲ್ಲಿ ಫಾರಂಗಾಗಿ ನಿಂತವರು, ಫಾರಂ ಭರ್ತಿ ಮಾಡಿ ನಿಂತವರು ಇಬ್ಬರೂ ಇದ್ದರು. ನಂತರ ನಮ್ಮ ಸಾಲು ಕಾಲುದಾರಿಯಿಂದ (Foot path) ಕಚೇರಿಯ ಒಳಗೆ ಪ್ರವೇಶಿಸಿತು. ಅಲ್ಲಿ ಬರೀ 120 ಮಂದಿಗೆ ಮಾತ್ರ ಪ್ರವೇಶವೆಂದು ಪ್ರಕಟಿಸಿದರು.

ಈ 120 ಮಂದಿಯಲ್ಲಿ ಫಾರಂಗಾಗಿ ನಿಂತವರಿಗೆ ಫಾರಂ ಕೊಟ್ಟು ಮರುದಿನ ಬರಲು ಸೂಚಿಸಿದರು. ಅದೃಷ್ಟವಶಾತ್ ನಾವು ಎಲ್ಲಾ ದಾಖಲೆಗಳೊಂದಿಗೆ ಸಾಲಿನಲ್ಲಿ ನಿಂತೆವು. ಇಲ್ಲಿಂದ ನಮ್ಮ ಹಾಸ್ಯ ಪ್ರಹಸನಗಳು ಪ್ರಾರಂಭವಾಯಿತು. ಮಕ್ಕಳಿಂದ ವೃದ್ಧರವರೆಗೂ ಸಾಲಿನಲ್ಲಿ ನಿಲ್ಲಬೇಕು. ಕೆಲ ಕುಟುಂಬದವರು ಬೆಳಗಿನ ಉಪಹಾರ, ಭೋಜನ, ನೀರು, ಕಾಫಿ ವಗೈರೆ ತಂದಿದ್ದರು. ಆದರೆ ನಾವು 8 ರಿಂದ 15 ಜನ ಬರಿ ದಾಖಲೆಗಳೊಂದಿಗೆ ಬಂದಿದ್ದೆವು. ಸೂರ್ಯದೇವ ತನ್ನ ಕಾರ್ಯವನ್ನು ನಿಷ್ಠೆಯಿಂದ ನಡೆಸಿದ್ದರಿಂದ ವೇಳೆ 9 ರಿಂದ 12 ಆಯಿತು. ನಂತರ ಅಲ್ಲಿನ ಮಕ್ಕಳ ಕಲರವ, ವೃದ್ಧರ ತೊಳಲಾಟ ಮತ್ತು ಮಧ್ಯ ವಯಸ್ಕರ ಕೂಗಾಟ ಪ್ರಾರಂಭವಾಯಿತು. ನಮ್ಮ ಬಹುದೊಡ್ಡ ಸಂಸ್ಕೃತಿಯೆಂದರೆ ಸಾಲಿನಲ್ಲಿ ಮಧ್ಯ ನುಸುಳುವುದು!

ಇದನ್ನೆಲ್ಲ ಕಂಡು ನಾನು ಮತ್ತು ಕೆಲವರು ಮಕ್ಕಳಿಗೆ ಬಿಸ್ಕೆಟ್ಟು, ನೀರು ಮುಂತಾದವುಗಳನ್ನು ತಂದು ಅವರಿಗೆ ಮುದ ನೀಡುವಂತೆ ಕೆಲವು ಆಟಗಳನ್ನು ಉದಾ: ಅಂತ್ಯಾಕ್ಷರಿ, ಪದಬಂಧ ಪ್ರಾರಂಭ ಮಾಡಿದೆವು. ಸುಮಾರು ಒಂದು ಗಂಟೆಯ ಕಾಲ ನಿಂತಲ್ಲೇ ನಮ್ಮ ಕಾರ್ಯಕ್ರಮಗಳು ನಡೆದವು. ಇಷ್ಟೆಲ್ಲಾ ಸರ್ಕಸ್ ನಡೆದರೂ ಸಹ ನಮ್ಮ ಸರದಿ ಬರಲಿಲ್ಲ. ಇಲ್ಲಿಗೆ ಎಲ್ಲರ ಸಹನೆಯ ಕಟ್ಟೆ ಒಡೆದು ಏನೂ ಮಾಡಲಾಗದ ಅಸಹಾಯಕ ಪರಿಸ್ಥಿತಿ ತಲುಪಿದೆವು. ಸುಮಾರು 120 ಜನರ ದಾಖಲೆಗಳನ್ನು ಪರಿಶೀಲಿಸಲು ಒಬ್ಬ ಸಿಬ್ಬಂದಿ ಮಾತ್ರ ಇದ್ದರು. ಅವರ ಸಹನಾಶೀಲತೆಯನ್ನು ಎಷ್ಟು ಮೆಚ್ಚಿದರೂ ಸಾಲದು. ಸುಮಾರು ಮಧ್ಯಾಹ್ನ 2-30ರ ಹೊತ್ತಿಗೆ ನಮ್ಮ ಸರದಿ ಬಂದಿತು. ದಾಖಲಾತಿಯ ಪರಿಶೀಲನೆಯ ನಂತರ ಮತ್ತೊಂದು ಸಾಲಿನಲ್ಲಿ ನಿಲ್ಲಬೇಕು. ಅಲ್ಲಿ ನಮ್ಮ ಭಾವಚಿತ್ರ, ಬೆರಳಚ್ಚು ಮತ್ತು ದೃಷ್ಟಿ ಪರೀಕ್ಷೆ ನಡೆಯಿತು. ಹಾಗು-ಹೀಗೂ ಛಲ ಬಿಡದ ತ್ರಿವಿಕ್ರಮನಂತೆ ನಿಂತಿದ್ದರಿಂದ ಸಂಜೆ 4 ಗಂಟೆಗೆ ನಮಗೆ ನಮ್ಮ 'ಆಧಾರ'ದ ರಸೀತಿ ದೊರೆಯಿತು.

ಇದನ್ನೆಲ್ಲಾ ಪರಿಶೀಲಿಸಿದರೆ ಏಕೆ ಸರ್ಕಾರ ಇಷ್ಟು ಬೇಜವಾಬ್ದಾರಿಯಿಂದ ವರ್ತಿಸುತ್ತಿದೆ ಎಂದು ತಿಳಿಯುತ್ತಿಲ್ಲ! ಇದಕ್ಕೆ ಪರಿಹಾರ :

1. ಹೆಚ್ಚು 'ಆಧಾರ್' ಕಾರ್ಡ್ ಕೊಡುವ ಕೇಂದ್ರಗಳನ್ನು ಅವರವರ ವಿಳಾಸದ ವ್ಯಾಪ್ತಿಯಲ್ಲಿ ತೆರೆಯಬೇಕು. 2. ನಿಗದಿತ ವೇಳೆಯನ್ನು ಗೊತ್ತುಪಡಿಸಬೇಕು.
3. 120 ಮಂದಿಗೆ ಒಬ್ಬರೇ ಸಿಬ್ಬಂದಿಯನ್ನು ನೇಮಿಸುವುದಕ್ಕೆ ಬದಲಾಗಿ ಮೂರು ಅಥವಾ ನಾಲ್ಕು ಜನರನ್ನು ನಿಯೋಜಿಸಬೇಕು.
4. ಫಾರಂ ಪಡೆಯಲು ಒಂದು ಸಾಲು ಹಾಗೂ ದಾಖಲೆಗಳನ್ನು ಪರಿಶೀಲಿಸಲು ಬೇರೊಂದು ಸಾಲು ಇರಬೇಕು.
5. ಹಿರಿಯರಿಗೆ ಹಾಗೂ ಮಕ್ಕಳಿಗೆ ಕುಡಿಯಲು ನೀರಿನ ವ್ಯವಸ್ಥೆ ಮತ್ತು ಕುಳಿತುಕೊಳ್ಳುವ ಆಸನಗಳ ಏರ್ಪಾಡು ಮಾಡಬೇಕು.



■ ಬಿ.ಪಿ. ಸರಸ್ವತಿ

ಅನುಭವ ಕಥನ

# ಹೆಣ್ಣು ಅಬಲೆಯೆ?

ಅವಳೇ ನಮ್ಮ ಮನೆಯಲ್ಲಿರೋ 'ಕಲಾ'. ನಮ್ಮನೆ ಕೆಲಸದಾಕೆ. ನಿಜ ಹೇಳಬೇಕಂದ್ರೆ ನಮ್ಮ ಮನೆಯವರಲ್ಲಿ ಅವಳೂ ಒಬ್ಬಳು. ಬಿಚ್ಚು ಮನಸ್ಸಿನ ಹೆಂಗಸು. ಎಲ್ಲ ಕಷ್ಟ-ಸುಖವನ್ನು ಮುಚ್ಚು ಮರೆಯಿಲ್ಲದೆ ಹಂಚಿಕೊಳ್ಳುವಳು.

ಗಂಡನಿಗೆ ತಿದ್ದಲಾರದಂತಹ ಕುಡಿತದ ಚಟ. ಯೌವನದ ಹೊಸ್ತಿಲಲ್ಲಿರುವ ಮಗ-ಮಗಳು, ಪ್ರತಿದಿನವೂ ಒಬ್ಬರಲ್ಲ ಒಬ್ಬರದು ಏನಾದರೊಂದು ಸಮಸ್ಯೆ ಇದ್ದೇ ಇರುತ್ತದೆ. ಮಗನಿಗೆ Video games ಹುಚ್ಚಾದರೆ, ಮಗಳಿಗೆ Boy friends ಗೀಳು. ಕಷ್ಟಪಟ್ಟು ಹೊಟ್ಟೆ-ಬಟ್ಟೆಗೆ ಹೊಂದಿಸುವಷ್ಟರಲ್ಲಿ ಗಂಡ ಅಥವಾ ಮಕ್ಕಳಿಗಾಗಿ uniform-books ಹೊಸಬಟ್ಟೆಗಾಗಿ ಸಾವಿರಾರು ರೂಪಾಯಿ ಸಾಲ ಮಾಡಬೇಕಾಗುತ್ತದೆ. ಜೊತೆಗೆ ಇವಳಿಗೂ ಚಿಕ್ಕ ವಯಸ್ಸು. ಗಂಡನಂತೂ ಅಪ್ರಯೋಜಕ. ಇವಳಿಗೆ ಸೀರೆ ಕೊಳ್ಳುವ ಆಸೆ.

ಸರಿ, ದಿನಬೆಳಗಾದರೆ ಶುರುವಾಗುತ್ತದೆ, ಇವಳ ಕಥಾ-ಪ್ರಸಂಗ. ಮೊದಲೇ ಮನೆ ಕೆಲಸವೆಲ್ಲಾ ಮುಗಿಸಿಬರುವುದು ಹತ್ತು ಗಂಟೆ ಮೇಲೆ. ಹಾ! ಹೇಳೋದು ಮರೆತಿದ್ದೆ. ಕಲಾ ಸಂಸಾರದೊಂದಿಗೆ ಇರುವುದು ನಮ್ಮ ಕಾಂಪೌಂಡ್‌ನಲ್ಲೇ ಇರುವ ಒಂದು ಪುಟ್ಟ ಮನೆಯಲ್ಲಿ. ಇಬ್ಬರಿಗೆ ಸಾಕಾಗೋ ಅಷ್ಟು ಜಾಗ. ಆದರೆ ಅಂಗಳ ದೊಡ್ಡದಾಗಿರೋದರಿಂದ ಹೇಗೋ ಅಡ್ಜಸ್ಟ್ ಮಾಡಿಕೊಂಡಿದ್ದಾರೆ. ಎಂತಹ ಕಠಿಣ ಪರಿಸ್ಥಿತಿಯಲ್ಲೂ ಅವಳ positve nature ಪ್ರಶಂಸೆ ಮಾಡುವಂಥದ್ದೇ. ಎಂಟನೇ ತರಗತಿಯವರೆಗೆ ಓದಿರುವುದರಿಂದ Library books, Magazines ಓದುವ ಅಭ್ಯಾಸ ಇರೋದ್ರಿಂದ ಸಾಕಷ್ಟು ಬುದ್ಧಿವಂತೆ. ಪುಸ್ತಕ ಓದುವುದು ಬಿಟ್ಟರೆ ಹಿಂದಿ, ಕನ್ನಡ Serials, TV9 ನ್ಯೂಸ್ ನೋಡುವುದು ಅವಳ hobby. ಇದರ ಪ್ರಭಾವದಿಂದ ಅವಳು ಬಹುಭಾಷಾ ಪ್ರವೀಣೆ ಆಗಿದ್ದಾಳೆ.

ಸರಿ, ಅವಳು ಬಂದ ತಕ್ಷಣ ಶುರುವಾಗುತ್ತದೆ, ಅವಳ ಜೀವನದ ಕಳೆದ 24 ಗಂಟೆಗಳ ಆಗು-ಹೋಗುಗಳ ಸಮಾಚಾರ. ಜೊತೆ-ಜೊತೆಗೇ ಅವಳ ಇಂಗ್ಲಿಷ್ ಭಾಷೆಯ ಪ್ರಯೋಗ. ಅವಳು ಉಪಯೋಗಿಸುವ ಒಂದೊಂದು ಇಂಗ್ಲಿಷ್ ಪದವೂ ನನ್ನ ಭಾಷಾ ಜ್ಞಾನಕ್ಕೆ ದೊಡ್ಡ challenge. ಆ ಪದದ ಅರ್ಥ ಗ್ರಹಿಸಬೇಕಾದರೆ ನನ್ನಲಿರುವ ಬುದ್ಧಿಶಕ್ತಿ ಎಲ್ಲಾ ಖರ್ಚು ಮಾಡಬೇಕಾಗುತ್ತದೆ. ಆದರೆ ಇದೂ ಒಂದು ಥರಾ Tonic ಇದ್ದರೂ ಇರಬಹುದು, ನನ್ನ ಜಡ್ಡು ಹಿಡಿದ ಮೆದುಳಿಗೆ ಕಸರತ್ತು ಸಿಕ್ಕಿದಷ್ಟೂ ಒಳ್ಳೆಯದೇ ಸರಿ. ಯಥಾಪ್ರಕಾರ ಅಂದೂ ಇದೇ ರೀತಿ ಯೋಚಿಸಿ ಪರೀಕ್ಷೆಗೆ ಸಿದ್ಧವಾದೆ. ಬಂದೇ ಬಂದಳು ನಮ್ಮ ಕಲಾ. ಬರುವಾಗಲೇ compoundನಲ್ಲಿ ಮಂಗಗಳ ಹಿಂಡು ಬಂದು ರಂಪಮಾಡಿಹೋಗಿದ್ದ ಸಾಮಾನುಗಳನ್ನೆಲ್ಲಾ ಎತ್ತಿ, ಒಪ್ಪಮಾಡಿ ಕೋತಿಗಳನ್ನು ಓಡಿಸಿ, ಹಿಂದಿನ ಬಾಗಿಲನ್ನು ಭದ್ರಮಾಡಿ ಒಳಗೆ ಬಂದಳು. "ನೋಡಮ್ಮಾ ಈಗತಾನೇ ಅರ್ಧಕಿಲೋ ತಮಾಟ ತಂದಿದ್ದೆ. ಎಲ್ಲಾ ಬಾಚಿಕೊಂಡಿವೆ ಆ ಕೋತಿಗಳು" ಅಂತ ಗೊಣಗುತ್ತಾ ಪೊರಕೆ ಕೈಗೆ ತೆಗೆದುಕೊಂಡಳು. ಸರಿ ಮಾತು ಮರೆಸಲು ನಾನು ಕೇಳಿದೆ "ಏನು ಕಲಾ, ನೆನ್ನೆ ನಿಮ್ಮನೇಲಿ ಏನೋ ಗಲಾಟೆ ನಡೀತಿದ್ದ ಹಾಗಿತ್ತು, ಏನಾಯಿತು?" ಅಂತ ಕೇಳಿದೆ.

"ಅಯ್ಯೋ, ಅದೇನ್ಕೇಳ್ತೀರಮ್ಮಾ, ದಿನಾ ಇದ್ದದ್ದೇ ನೆನ್ನೆನೂ ನಮ್ಮ ಅನ್ಮಂತು ಎಣ್ಣೆ ಆಕ್ಕೊಂಡ್ ಬಂದ್ ಗಲಾಟೆ ಮಾಡ್ತಿದ್ದ. ಅವನೊಬ್ಬ ಷಾಡಿಷ್" ಅಂದಳು.

"ಆಹಾ! ಇದೇನಪ್ಪಾ ಈವತ್ತಿನ challenge ತುಂಬಾ ಕಷ್ಟವಾಗಿರೋಹಾಗಿದೆ ನನ್ನಲ್ಲಿ ಇದನ್ನು ಬಿಡಿಸುವ ಶಕ್ತಿ ಇದೆಯೋ ಇಲ್ಲವೋ" ಎಂದು ತಲೆ ಕೊಡವಿಕೊಂಡೆ. ಏನಿರಬಹುದು! ಇಷ್ಟು ಬೇಗ ಅವಳನ್ನೇ ಕೇಳಿ ನನ್ನ ಅಜ್ಞಾನ ಪ್ರದರ್ಶಿಸಲು ಇಷ್ಟ ಆಗಲಿಲ್ಲ. Smart ಆ ಖಂಡಿತ ಇಲ್ಲ. ಹನುಮಂತೂ ಎಲ್ಲಿ smart ಎಲ್ಲಿ, ಅಥವಾ smart ಇರಬಹುದಾ! ಗಂಡ sober ಆಗಿದ್ದಾಗ ಕಾಲೇಜು ಹುಡುಗನ ಹಂಗೆ ಕಾಣ್ತಾನಮ್ಮಾ ಅಂತ ಅವಳೇ ಹೊಗಳಿದ್ದುಂಟು. ಆದರೆ ಈ ಸನ್ನಿವೇಶದಲ್ಲಿ ಆ ಪದ ಸರಿಹೊಂದಲಾರದು ಎಂದು ಯೋಚಿಸಿ ಕೊನೆಗೆ ಸೋತು ಅವಳನ್ನೇ ಕೇಳಿದೆ. "ಅದೇನು ಕಲಾ ಷಾಡಿಷು" ಅಂದರೆ ಅಂತ, ಅದಕ್ಕೆ ಅವಳು ಅನಾಯಾಸವಾಗಿ ಹೇಳಿದ ಜವಾಬು, "ಅದೇನಮ್ಮಾ, ಅದೇನೋ ಇಂಗ್ಲಿಷ್‌ನಲ್ಲಿ ಹೇಳ್ತಾರಲ್ಲಾ: ಬೇರೆಯವರ ಕಷ್ಟ ನೋಡಿ ಸಂತೋಷ ಪಡೋ ಜನಾ ಅಂತಾ ಅದೇ ಜಾಯಮಾನ ನಮ್ಮನೆಯವನ್ದು." ಆಗ ನನಗೆ ಜ್ಞಾನೋದಯವಾಯಿತು. "ಓಹೋ! ಅದು sadist" ಅಂತ. ಇನ್ನೂ ಒಂದು ಸೋಲಿನಿಂದ ಸುಧಾರಿಸಿಕೊಳ್ಳುವಷ್ಟರಲ್ಲಿ ಮತ್ತೊಂದು word bomb ಹಾಕಿದಳು. ನಮ್ಮ ಕಲಾ ಮೆಲ್ಲಗೆ ನನ್ನ ಕಿವಿ ಹತ್ತಿರ ಬಂದು "ಅಮ್ಮಾ ನೆನ್ನೆ ಒಂದು 'ಪ್ರೀಪ್ಸಲ್' ಬಂದ್ಯೆತಮ್ಮಾ" ಅಂದಳು. "ಇದೇನಪ್ಪಾ ಹೊಸ ತಲೇನೋವೂ ಇರಲಿ ಈ ಗಂಟನ್ನು ನಾನೇ ಬಿಡಿಸೋಣ" ಅಂತ ಯೋಚಿಸಿದೆ. ಏನಿರಬಹುದು! ಈ ಕಗ್ಗಂಟು! personal ಆ, parcel ಆ, purpose ಆ, ಪಾರ್ಸಲ್ ಇರಬಹುದೂಂತ 'ಎಲ್ಲಿಂದ ಬಂದಿದೆ ಕಲಾ?' ಅಂತ ಕೇಳಿದೆ. ಅದಕ್ಕವಳು "ನಮ್ಹನ್ಮಂತೂ



ಚಿಕ್ಕಮ್ಮಾ ಅವ್ರಲ್ಲಾ ಅವ್ರ ಸಂಬಂಧಿಕರಂತೆ. ಮೊನ್ನೆ ನಾವು ಊರಿಗೆ ಹೋಗಿದ್ವಲ್ಲಾ ಆಗ ನಮ್ಮ ರಮ್ಯಾನ ನೋಡಿದ್ರಂತೆ. ಅವರಿಗೆ ನಮ್ಮ ಹುಡುಗೀನಾ ಸೊಸೆ ಮಾಡಿಕೊಳ್ಳುವುದಕ್ಕೆ ಇಷ್ಟ ಇದೆಯಂತೆ. ಅದೇ ನೆನ್ನೆ ಹೇಳಿಕಳಿಸಿದ್ರು" ಅಂದಳು. ಆಗ ಹೊಳೆಯಿತು ನನ್ನ ಮಂದಬುದ್ಧಿಗೆ ಅದು parcel ಅಲ್ಲಾ "proposal" ಅಂತ.

ಇನ್ನೂ ಅವಳ ಬತ್ತಳಿಕೆಯಲ್ಲಿ ಬಹಳಷ್ಟು ಬಾಣಗಳಿವೆ. ಉದಾಹರಣೆಗೆ:

inspection – ಅಂದರೆ infection
ಅಫ್‌ಟೇರ್ – upstair
Trick – strict

"ಆ ನಮ್ಮ್ ಅನ್ಮಂತು ಬರ್ಲಿ. ಇವತ್ತು ಅವನಿಗೆ ಸರಿಯಾದ 'ಫಿಟಿಂಗ್' ಮಡಗ್ತೀನಿ (ಅಂದರೆ ಬುದ್ಧಿ ಕಲಿಸ್ತೀನಿ)."

"ನೆನ್ನೆ ನಮ್ಮಣ್ಣ ಬರ್ತಾನೆ ಅಂತ ನಾನು ಯಕ್ಷಪ್ಟ್ ಮಾಡಲಿಲ್ಲಾಮ್ಮಾ" (ಅಂದರೆ expect ಮಾಡಲಿಲ್ಲಾ).

ಲೀಲಾಜಾಲವಾಗಿ ಅವಳು ಉಪಯೋಗಿಸುವ ಇಂತಹ ಪದಗಳ ಸುರಿಮಳೆ ನನ್ನನ್ನು ಕ್ಷಣಕಾಲ ಗರಬಡಿದವಳಂತೆ ಮಾಡುತ್ತದೆ. ಅವಳು ಇಂಗ್ಲಿಷ್ ಒಂದೇ ಅಲ್ಲ. ಹಲವು ಭಾಷಾ ಪ್ರವೀಣೆ. ಯಾವ ಹಿಂದಿ ಸೀರಿಯಲ್ ಕೇಳ್ತೀರಾ! ಎಲ್ಲಾ ನೋಡುತ್ತಾಳೆ.

ನನಗೆ ಈಗ TV ನೋಡುವುದಕ್ಕಿಂತ ಅವಳ version of the serial ಇನ್ನೂ interesting ಆಗಿ ಇರುತ್ತದೆ. ಯಾವ serialನಲ್ಲಿ ಯಾವ Episodeನಲ್ಲಿ ಯಾರು Missing ಇದ್ರು. ಅವರು ಏನು ಮಾಡುತ್ತಿರಬಹುದು ಅಂತ ಮೊದಲೇ Predict ಮಾಡುತ್ತಾಳೆ. ಒಂದೊಂದು Dialogue ಅನ್ನೂ ಅಕ್ಷರಶಃ Repeat ಮಾಡುತ್ತಾಳೆ.

ಮನೆಗೆ ಬಂದ ತಕ್ಷಣ ಒಳಗೆ ಒಂದು ಪಕ್ಷಿನೋಟ ಹರಿಸುತ್ತಾಳೆ. ಎಲ್ಲೆಲ್ಲಿ ಯಾವ ಪದಾರ್ಥ ಬದಲಾಗಿದೆ, ಎಲ್ಲಾ ಅವಳ ತೀಕ್ಷ್ಣ ಬುದ್ಧಿಗೆ ಗಳಿಗೆಯಲ್ಲಿ ತಿಳಿದು ಹೋಗುತ್ತದೆ. Sofa cover ಅಥವಾ Bed cover change ಆಗಿದ್ರೆ ಸಾಕು, ತಕ್ಷಣ ಅವಳ ಗಮನಕ್ಕೆ ಬರುತ್ತದೆ. ಇದೊಳ್ಳೆ "Look" ಕೊಡುತ್ತಮ್ಮಾ ಅಂತ ಅವಳ opinion ತಿಳಿಸಿಬಿಡ್ತಾಳೆ.

ಬಡತನ, ಕುಡುಕ ಗಂಡ, ಬೆಳೆಯುವ ಮಕ್ಕಳು ಅನಿಶ್ಚಿತ ಬದುಕು, ನೋವು, ಎಲ್ಲದರ ಮಧ್ಯೆ ಮಾನಸಿಕ ಸಮತೋಲನೆಯನ್ನು ಕಳೆದುಕೊಳ್ಳದೆ ಇರುವಷ್ಟರಲ್ಲೇ ಸುಖ ಕಂಡು, ಕುಡುಕ ಗಂಡನನ್ನು ಖಂಡಿಸಿ, ಸರಿಯಾಗಿರುವಾಗ ಬುದ್ಧಿ ಹೇಳಿ ಮಕ್ಕಳಿಗೆ ಬುದ್ಧಿವಾದ ಹೇಳುವಾಗ ಮಮತೆಯ ಮೂರ್ತಿಯಾಗಿ, ಕೆರಳಿಸುವವರಿಗೆ ದುರ್ಗೆಯಾಗಿ ಸಂಸಾರದ ದೋಣಿಯನ್ನು ಸರಾಗವಾಗಿ ತೂಗಿಸಿಕೊಂಡು, ಭೂತ, ಭವಿಷ್ಯದ ಬಗ್ಗೆ ನಿರ್ಲಿಪ್ತಳಾಗಿ ವರ್ತಮಾನದಲ್ಲಿ ತೃಪ್ತಿ ಕಂಡಿರುವ ಈ ಹೆಣ್ಣು ಅಬಲೆಯೇ?

ಸಣ್ಣ ಪುಟ್ಟ ಅವಮಾನಗಳನ್ನು ಸಹಿಸಲಾರದೆ ಸಂಸಾರದ ಜವಾಬ್ದಾರಿಯನ್ನು ಹೊರಲಾರದೆ ಕುಡಿತದ ಮೊರೆ ಹೊಕ್ಕಿರುವ ಆ ಗಂಡಿಗಿಂತಲೂ "ಏನೇ ಬರಲಿ, ನೋಡೇ ಬಿಡ್ತೀನಿ" ಎಂದು ದಿಟ್ಟತನದಿಂದ ಜೀವನದ ಏರು ಪೇರುಗಳನ್ನು ಎದುರಿಸುವ ಇವಳಲ್ಲವೇ "ಸಬಲೆ".



■ ಗೀತಾಮೂರ್ತಿ

## ಹುಚ್ಚು ಮನಸ್ಸಿನ ಉಚ್ಚ ಮತ್ತು ತುಚ್ಛ ವಿಚಾರಗಳು

ಮನವು ಕಾಮರೂಪದ ಮಣಿ ಮುಕುರ. ನೀ ನಕ್ಕಾಗ ಅದುವೇ ಕ್ಷೀರಸಾಗರ. ನೀ ನಕ್ಕು ಅನ್ಯರನು ನಗಿಸಿದಾಗ ಅದುವೇ ಇಕ್ಷುರಸದಾಗರ. ನೀ ಅತ್ತಾಗ ಅದುವೇ ಜಲಸಾಗರ, ಕ್ರೋಧದಿಂ ನೀ ಬುಸುಗುಟ್ಟಿದಾಗ ಅದುವೆ ಸಪ್ತ ಶಿರದ ನಾಗರ. ದುಃಖತಪ್ತರ ಕಣ್ಣೀರನೊರೆಸಿದಾಗ ನೀ ಪರಮ ಕರುಣಾಕರ. ದೀನರಿಗೆ ದೌರ್ಜನ್ಯ ತೋರಿದಾಗ ನೀ ದುರುಳ ಕಂಸಾಸುರ. ಹೆರರ ಕಷ್ಟಕ್ಕೊದಗಿದಾಗ ಸ್ವರ್ಣಭಾಸುರ ಭಾಸ್ಕರ. ಪರರ ವಂಚಿಸಿದಾಗ ಧರ್ಮಬಾಹಿರತಸ್ಕರ, ಮನವ ನಿಶ್ಚಲದಿ ನೀ ನಿಗ್ರಹಿಸಿ, ಸ್ಥಿತಪ್ರಜ್ಞನೆನಿಸಿ, 'ಆಸೆ' ಎಂಬ ಆದಿಶೇಷನ ಮೆಟ್ಟಿ, ಆತ್ಮಾನಂದದ ಕ್ಷೀರಸಾಗರದ, ಸ್ವಸ್ವರೂಪದಲಿ ಓಲಾಡುತಿಹ ಮಹಾವಿಷ್ಣು ನೀನಾಗು. ಪ್ರಕೃತಿಯೇ ನಿನಗೆ ಭೃತ್ಯಳಾಗುವಳಾಗ ಅದನುಳಿದು ಆಸೆಗಳ ಆಳಾಗಿ, ವಾಸನೆಗಳ ದಾಸನಾಗಿ ನೀಕುಣಿದಾಗ, ಹೃದಯವದು ಝಂಝಾವಾತಕ್ಕೆ ಸಿಲುಕಿ, ಹುಚ್ಚೆದ್ದು ಕೊಚ್ಚಿ ಆರ್ಭಟಿಸಿ, ಅಲ್ಲೋಲ ಕಲ್ಲೋಲವಾಗುವುದು, ಕ್ಷುಬ್ಧಸಾಗರ, ಆಗ ಸಪ್ತವ್ಯಕ್ಷಗಳಿಂದ ಕಾರುವ ಆದಿಶೇಷನ ವಿಷಧಾರೆಯಾಗುವುದು ಘೋರ ಭೀಕರ. ಹಾಲೆಲ್ಲಾ ಹಾಲಾಹಲವಾಗಿ, ಆನಂದಸಾಗರವು ಹಾಳಾಗಿ ಪರಿಣಮಿಸುವುದು. ಕಾಳನಾಗರದ ವಿಷದ ಮಡುವಾಗಿ ಪ್ರಕೃತಿಯೇ ನಿನಗೆ ಮೃತ್ಯುವಾಗುವಳಾಗ, ಮನದಿ ತುಸು ಚಿಂತಿಸಯ್ಯಾ, ತಾಳ್ಮೆಯುನುತಾಳು, ಮಾಡದಿರು ಹಾಲ್ಗಡಲ ನಂಜುಕಡಲಾಗಿ, ಕುಣಿದಾಡು ವಿಷಧರನ ಶಿರದ ಮೇಲೆ ಕಾಳಿಂಗಮರ್ದನನಾಗಿ, ಮನದಿ ಹುದುಗಿರುವ ವಾಸನೆಗಳನು ನಿರ್ಮೂಲ ಮಾಡಿ, ಹೃದಯವನು ಪರಿಶುದ್ಧವಾಗಿಟ್ಟು, ಧ್ಯಾನ ತಪಗಳಿಂ ಪಾವನಗೊಳಿಸಿ, ಮನನದಿಂ ಮಂಥನವ ಮಾಡಿ, ಆ ಕ್ಷೀರಸಮುದ್ರದಿಂ ಉದಿಪ, ಐರಾವತ, ಉಚ್ಚೈಶ್ರವಸ್ಸು, ಧನ್ವಂತರಿ, ಕಾಮಧೇನು, ಕಲ್ಪವೃಕ್ಷ, ಮಹಾಲಕ್ಷ್ಮೀ ಕೊನೆಗೆ ಅಮೃತ ಇವುಗಳೆಲ್ಲವ ನೀ ಪಡೆಯಲೆಳಸು. ಅದಕ್ಕಾಗಿ ನೀ ಶ್ರಮಿಸು, ಶಾಶ್ವತದ ಶಾಂತಿಯಲಿ ವಿರಮಿಸು.



*ಸಂಗ್ರಹ:*
*ಬಿ.ಎನ್. ಶಾರದಾ ನಾರಾಯಣಸ್ವಾಮಿ*

## ಛಾಯಾಚಿತ್ರ ಪ್ರಕಟಣೆಗೆ ಆಹ್ವಾನ

ನಮ್ಮ ಬಾಂಧವರು ತಮ್ಮ ಅವಿಭಕ್ತ ಕುಟುಂಬದ ಹಳೆಯ ಒಂದು ಸಮೂಹಿಕ ಛಾಯಾಚಿತ್ರವನ್ನು 'ಬೃಹಚ್ಚರಣ'ದಲ್ಲಿ ಪ್ರಕಟಣೆಗಾಗಿ ಕಳುಹಿಸಿಕೊಡಲು ಕೋರಲಾಗಿದೆ.

ಒಂದು ಸಂಚಿಕೆಯಲ್ಲಿ ಒಂದು ಕುಟುಂಬದ ಛಾಯಾಚಿತ್ರವನ್ನು ಕ್ರಮವಾಗಿ ಪ್ರಕಟಿಸಲಾಗುವುದು.

–ಸಂ.



# ಡಾ. ಡಿ.ವಿ. ಗುಂಡಪ್ಪ

ಡಿ.ವಿ.ಗುಂಡಪ್ಪನವರು ಕನ್ನಡ ಸಾಹಿತ್ಯ ವಲಯದಲ್ಲಿ ಡಿ.ವಿ.ಜಿ. ಎಂದು ಚಿರಪರಿಚಿತರು. ಇವರ ಪೂರ್ಣ ಹೆಸರು ದೇವನಹಳ್ಳಿ ವೆಂಕಟರಮಣಯ್ಯ ಗುಂಡಪ್ಪ. ಇವರು ಕೋಲಾರ ಜಿಲ್ಲೆಯ ಮುಳುಬಾಗಿಲಿನಲ್ಲಿ ಮಾರ್ಚಿ 3, 1887ರಂದು ಜನಿಸಿದರು. ಪ್ರಾಥಮಿಕ, ಪ್ರೌಢಶಾಲೆ ಶಿಕ್ಷಣವನ್ನು ಮುಳುಬಾಗಿಲಿನಲ್ಲೆ ಮುಗಿಸಿದರು. ಸ್ವತಃ ಆಸಕ್ತಿಯಿಂದ ಅಧ್ಯಯನ ನಡೆಸಿ, ಸಂಸ್ಕೃತ, ಕನ್ನಡ, ಇಂಗ್ಲಿಷ್, ತೆಲುಗು ಭಾಷೆಗಳನ್ನು ಅರಿತಿದ್ದರು. ಎಸ್.ಎಸ್.ಎಲ್.ಸಿ. ಶಿಕ್ಷಣದ ನಂತರ ಕೆ.ಜಿ.ಎಫ್. ಕಾರ್ಖಾನೆಯಲ್ಲಿ ಗುಮಾಸ್ತರಾಗಿ ನಂತರ ಬೆಂಗಳೂರಿನಲ್ಲಿ ಜಟಕಾ ಗಾಡಿಗೆ ಬಣ್ಣ ಬಳಿಯುವ ಕಾಯಕದ ವೃತ್ತಿಜೀವನ ಆರಂಭಿಸಿದರು.

ಡಿ.ವಿ.ಜಿ.ಯವರು ಕವಿಯಾಗಿ, ನಾಟಕಕಾರರಾಗಿ, ರಾಜನೀತಜ್ಞರಾಗಿ, ವಿಮರ್ಶಕರಾಗಿ, ಸಾಹಿತ್ಯ ಜಗತ್ತಿಗೆ ಅನರ್ಘ್ಯ ಕೃತಿ ರತ್ನಗಳನ್ನು ನೀಡಿದ್ದಾರೆ. ಕವಿಯಾಗಿ ನಿವೇದನ, ಮಂಕುತಿಮ್ಮನ ಕಗ್ಗ, ಅಂತಃಪುರ ಗೀತೆ, ಕೇತಕಿವನ, ವಸಂತ ಕುಸುಮಾಂಜಲಿ ಎಂಬ ಕೃತಿಗಳನ್ನು ರಚಿಸಿದ್ದಾರೆ. ಬೆಕ್ಕೋಜಿ, ಇಂದ್ರವಜ್ರ ಎಂಬ ಶಿಶುಸಾಹಿತ್ಯ ಕೃತಿಗಳನ್ನು ರಚಿಸಿದ್ದಾರೆ. ನಾಟಕಕಾರರಾಗಿ ತಿಲೋತ್ತಮೆ, ಮ್ಯಾಕ್‌ಬೆತ್, ಪರಶುರಾಮ ಮುಂತಾದವುಗಳನ್ನು ರಚಿಸಿದ್ದಾರೆ. ಪುರುಷಸೂಕ್ತ, ಈಶಾವಾಸ್ಯೋಪನಿಷತ್ ಎಂಬ ಧಾರ್ಮಿಕ ಚಿಂತನೆಯ ಕೃತಿಗಳಿಗೆ ವ್ಯಾಖ್ಯಾನ ಬರೆದಿದ್ದಾರೆ. 'ಜೀವನ ಧರ್ಮಯೋಗ' ಎಂಬ ಗ್ರಂಥದಲ್ಲಿ ಶ್ರೀಮದ್ಭಗವದ್ಗೀತೆಗೆ ಕನ್ನಡದಲ್ಲಿ ಭಾಷ್ಯ ಬರೆದಿದ್ದಾರೆ.

ಅಂತಃಪುರಗೀತೆಯನ್ನು ಇವರು ಬೇಲೂರಿನಲ್ಲಿ ಇರುವ ಶಿಲಾಬಾಲಿಕೆಯರನ್ನು ನೋಡಿ ಹೊಗಳಿ ರಚಿಸಿದ್ದಾರೆ.

ಇವರು ರಚಿಸಿರುವ 'ಮಂಕುತಿಮ್ಮನ ಕಗ್ಗ'ವನ್ನು ಕನ್ನಡದ ಭಗವದ್ಗೀತೆ ಎಂದು ಕರೆಯುತ್ತಾರೆ. ಈ ಕಗ್ಗವು ಭಗವದ್ಗೀತೆಯ ಬೋಧನೆಗಳ ಸಂಗ್ರಹವೇ ಆಗಿದ್ದು, ಇದನ್ನು ಡಿ.ವಿ.ಜಿ.ಯವರು ಸರಳವಾದ ಉದಾಹರಣೆ ಕೊಟ್ಟು, ಸರಳ ಭಾಷೆಯಲ್ಲಿ ಹೇಳಿದ್ದಾರೆ. ಈ ಲೋಕದ ಜನರನ್ನು 'ಮಂಕುತಿಮ್ಮ' ಎಂದು ಕರೆದಿದ್ದಾರೆ.

ಮಂಕುತಿಮ್ಮನ ಕಗ್ಗವು 1943ರಲ್ಲಿ ಮೊದಲ ಮುದ್ರಣವಾಯಿತು. ಅದರಲ್ಲಿ ಡಿ.ವಿ.ಜಿ.ಯವರ ಹೆಸರಿರಲಿಲ್ಲ. ಈ ವಿಷಯದಲ್ಲಿ ಡಿ.ವಿ.ಜಿ.ಯವರು ಹೆಚ್ಚು ಕಾಳಜಿವಹಿಸಲಿಲ್ಲ.

ವಿಶ್ವಕವಿ ಕುವೆಂಪುರವರು ಕಗ್ಗವನ್ನು ಓದಿ ತಮ್ಮ ಅನಿಸಿಕೆಯನ್ನು ಹೀಗೆ ಹೇಳಿದ್ದರು:

**'ಹಸ್ತಕ್ಕೆ ಬರೆ ನಕ್ಕೆ**
**ಓದುತ್ತಾ ಓದುತ್ತಾ**
**ಮಸ್ತಕಕಿಟ್ಟು ಗಂಭೀರವಾದೆ**
**ವಿಸ್ತರದ ದರ್ಶನಕೆ ತುತ್ತ ತುದಿಯಲ್ಲಿ ನಿನ್ನ**
**ಪುಸ್ತಕಕೆ ಕೈಮುಗಿದೆ –ಮಂಕುತಿಮ್ಮ'**

ಸಾರಸ್ವತ ಲೋಕದ ಅಶ್ವತ್ಥ ವೃಕ್ಷವಾದ ಡಿ.ವಿ.ಜಿ. ಅವರ ಹೆಸರಿನಲ್ಲೇ 'Divine vision of God' ಇದೆ. ಇವರು ದಿವ್ಯ ವಿದ್ಯಾ ಜ್ಞಾನಿಯೂ ಹೌದು.

ತಿಮ್ಮನಲ್ಲಿ ಮರೆತಿರುವ ತಿಳುವಳಿಕೆಯನ್ನು ಕಗ್ಗದ ಮೂಲಕ ಅಂದರೆ ಖಡ್ಗದ ಮೂಲಕ ಜ್ಞಾನದವರೆಗೆ ಹಚ್ಚುತ್ತಿದ್ದಾರೆ.

**ಇರುವ ಕೆಲಸವ ಮಾಡು ಕಿರಿದೆನದೆ ಮನವಿಟ್ಟು**
**ದೊರೆತುದ ಹಸಾದವೆಂದುಣ್ಣು ಗೊಣಗಿಡದೆ ॥**
**ಧರಿಸು ಲೋಕದ ಭಾರವ ಪರಮಾರ್ಥವನು ಬಿಡದೆ**
**ಹೊರಡು ಕರೆ ಬರಲ್ ಅಳದೆ–ಮಂಕುತಿಮ್ಮ**

ಈ ಮನೋಭಾವ ಹೇಗಿರಬೇಕೆಂದರೆ ನಿಮ್ಮ ಭಾಗಕ್ಕೆ ಬಂದ ಯಾವ ಕೆಲಸವನ್ನಾದರೂ ಅದು ಭಗವತ್ಪ್ರೀತಿಗಾಗಿ ಮಾಡಿದ್ದು, ಇದು ಅವನ ಕೆಲಸ ಎಂದು ಮಾಡಬೇಕು. ಇದು ಬ್ರಹ್ಮವಸ್ತುವಿನ ಕೆಲಸವಾದ ಮೇಲೆ, ಇದರಲ್ಲಿ ಅವನೇ ಪಾಲುಗೊಳ್ಳುತ್ತಿರುವಾಗ ಇದರಲ್ಲಿ ಕೀಳಾವುದು? ಹಿರಿದಾವುದು? ಎಲ್ಲಾ ಕೆಲಸವನ್ನೂ ಶ್ರದ್ಧೆಯಿಂದ ಮನಸ್ಸಿಟ್ಟು ಮಾಡಬೇಕು. ತನಗೆ ದೊರೆತಿದ್ದನ್ನು ಅವನ ಪ್ರಸಾದವೆಂದು ತಿಳಿದು ಗೊಣಗಾಡದೆ' ಸ್ವೀಕರಿಸಬೇಕು. ಲೋಕದ ಕೆಲಸವನ್ನು ಮಾಡುವಾಗ ಪರಮಾರ್ಥದಲ್ಲಿ ದೃಷ್ಟಿಯಿರಿಸುವುದನ್ನು ಮರೆಯಬಾರದು. ಏಕೆಂದರೆ ಇದೆಲ್ಲವೂ ಅವನಿಗೆ ಸೇರಿದ್ದೇ ಅಲ್ಲವೆ? ನಿನ್ನ ಕೆಲಸ ಇಲ್ಲಿಗೆ ಸಾಕು ಎಂದು ಅವನು ಕರೆದರೆ ಆಗ ಅಳದೇ ಹೊರಡಬೇಕು.

ಹೀಗೆ ಅನೇಕ ವಿಷಯಗಳನ್ನು ತಿಳಿಸಿಕೊಟ್ಟ, ಹಾಗೂ ಅನೇಕ ಗೌರವ ಸನ್ಮಾನಗಳಿಗೆ ಅರ್ಹರಾದ ಇವರು 7–10–1975ರಂದು ವಿಧಿವಶರಾದರು.



■ **ಅಚಲಾ ರಮೇಶ್**

# ಬೆಂಗಳೂರು ನಗರ

ಆಗಿತ್ತು ಅಂದು ಬೆಂಗಳೂರು ಹಸಿರು ನಗರ
ಜನರಿಗೆ ಸಿಕ್ಕಿತ್ತು ನೆಮ್ಮದಿಯ ಆಗರ
ಈಗಾಗಿದೆ ಇದು ಒಂದು ಕಾಂಕ್ರೀಟ್ ಕಾಡು
ಇನ್ನೆಲ್ಲಿದೆ ಹಸಿರು ವನದ ನಾಡು

ದಾರಿಯಲ್ಲಿ ಎಲ್ಲಿ ನೋಡಿದರೂ ಹಳ್ಳಗಳ ಅಗೆತ
ಅಲ್ಲಲ್ಲಿ ಬೋರ್‌ವೆಲ್‌ಗಳ ಕೊರೆತ
ಬತ್ತುತ್ತಿದೆ ಕೆರೆಗಳು ಇಲ್ಲಿ
ತಲೆ ಎತ್ತುತ್ತಿವೆ ಬಹುಮಹಡಿ ಕಟ್ಟಡಗಳು ಅಲ್ಲಿ

ಮೆಟ್ರೋ ತೋಡಿದ ರಸ್ತೆಗಳು ಅಲ್ಲಲ್ಲಿ
ತಿಣುಕಾಡುತಾ ದಾರಿ ಮಾಡಿಹೋಗುವುವು ವಾಹನಗಳು ಅಲ್ಲಿ...
ಎಲ್ಲೆಲ್ಲೂ ಕಿವಿ ಗಡಚಿಕ್ಕುವ ರವ
ಇನ್ನೆಲ್ಲಿ ಹಕ್ಕಿಗಳ ಕಲರವ ?

ವಾಹನಗಳು ಎಬ್ಬಿಸುವುದು ಧೂಳು
ಮಾಡುವುದು ಜನಸಾಮಾನ್ಯರ ಆರೋಗ್ಯ ಹಾಳು
ಎಲ್ಲೆಲ್ಲೂ ವಾಹನಗಳ ಹಾವಳಿ
ಇನ್ನೆಲ್ಲಿ ಮುಂಜಾವಿನ ತಂಪು ಗಾಳಿ

ಮಾರ್ಗದಲ್ಲಿ ಎಲ್ಲೆಲ್ಲೂ ಕಸದ ರಾಶಿ
ಮರೀಚಿಕೆಯಾಗಿದೆ ಸಸ್ಯಕಾಶಿ
ಎಲ್ಲೆಡೆ ತುಂಬಿದೆ ಉಸಿರುಕಟ್ಟುವ ದುರ್ಗಂಧ
ಇನ್ನೆಲ್ಲಿದೆ ಹೂವುಗಳ ಸುಗಂಧ

ಬೇಕು ನಮಗೆ ಉತ್ತಮ ಪರಿಸರ
ಜನರೇ ಜಾಗೃತರಾಗಿರಿ ಸರಸರ
ಮಾಡಿ ಬೆಂಗಳೂರು ಹಸಿರು ವನಗಳ ತೋಟ
ಪಡೆಯಿರಿ ಇಲ್ಲಿ ತಂಪಾದ ಒಡನಾಟ



■ ಕೆ.ಆರ್. ನಾಗರತ್ನ



## ಸಂಗೀತ ಶಾಲೆಯ ಪೋಷಕರ ದಿನಾಚರಣೆ





**'ಬೃಹಚ್ಚರಣ'** ಸಮುದಾಯದ ಸಂಗೀತ ವಿದ್ವಾನ್ ದಿ॥ ಶ್ರೀ ಕೆ.ಎಸ್. ಛಾಯಾಪತಿಯವರು ಸ್ಥಾಪಿಸಿದ **"ಗೀತಾ ಮಂದಿರ ಸಂಗೀತ ಪಾಠಶಾಲೆ"**ಯು, ಇತ್ತೀಚೆಗೆ ತನ್ನ **"ಪೋಷಕರ ದಿನಾಚರಣೆ"**ಯನ್ನು ಬಸವನಗುಡಿಯ ಶ್ರೀ ರಾಘವೇಂದ್ರಸ್ವಾಮಿ ದೇವಸ್ಥಾನದ ಸಭಾಂಗಣದಲ್ಲಿ ನೆರವೇರಿಸಿತು. ಶಾಲೆಯ ನೂರಾರು ವಿದ್ಯಾರ್ಥಿಗಳಿಂದ ಹಾಡುಗಾರಿಕೆ ಹಾಗೂ ವಾದ್ಯಸಂಗೀತ ಕಾರ್ಯಕ್ರಮವು ಶ್ರೀ ಕೆ.ಸಿ. ಜಯರಾಂ ಹಾಗೂ ಶ್ರೀಮತಿ ಕೆ.ಸಿ. ಪ್ರಮೀಳರವರ ನಿರ್ದೇಶನದಲ್ಲಿ ನಡೆಯಿತು. ಶ್ರೀಮತಿ ಶುಭ ಗೋವಿಂದರಾವ್‌ರವರಿಂದ ದೇವರನಾಮ ಹಾಗೂ ಶ್ರೀಮತಿ ಸರಸ್ವತಿ ನಟರಾಜ್‌ರವರ ವೀಣಾ ಕಾರ್ಯಕ್ರಮ ವಿಶೇಷವಾಗಿತ್ತು.

■ ಸಿ. ಮುರುಳಿಕೃಷ್ಣ




## ನೂತನ ಗೃಹಪ್ರವೇಶ

'ಬೃಹಚ್ಚರಣ' ಸಂಘದ ಸದಸ್ಯ ಶ್ರೀ **ಜೆ.ಡಿ.ಕೆ. ಶೇಷಗಿರಯ್ಯ** ಹಾಗೂ ಶ್ರೀಮತಿ **ಎಂ.ಆರ್. ನಾಗರತ್ನಮ್ಮ**ರವರು 14-2-2013ರಂದು ನೂತನವಾಗಿ ನಿರ್ಮಿಸಿರುವ **'ಶ್ರೀ ಸದ್ಗುರು'** ಗೃಹಪ್ರವೇಶವನ್ನು ನೆರವೇರಿಸಿರುತ್ತಾರೆ. ಸಂಘವು ಈ ಸಂದರ್ಭದಲ್ಲಿ ಅವರಿಗೆ ಶುಭ ಹಾರೈಸುತ್ತದೆ.

* * *

ಸಂಘದ ಕಾರ್ಯದರ್ಶಿ ಶ್ರೀ **ವಿ.ಎಸ್. ಮಣಿ** ಹಾಗೂ ಶ್ರೀಮತಿ **ಕಲ್ಪನಾಮಣಿ**ಯವರು ಬೆಂಗಳೂರಿನ ಎಚ್.ಎಸ್.ಆರ್. ಬಡಾವಣೆಯಲ್ಲಿ 5-4-2013ರಂದು **'ಸಂಜನಿ'** ನೂತನ ಮನೆಯ ಗೃಹ ಪ್ರವೇಶವನ್ನು ಮಾಡಿರುವ ಸಂದರ್ಭದಲ್ಲಿ ಸಂಘವು ಶ್ರೀ **ಆರ್.ಎಸ್. ವೆಂಕಟಗಿರಿಯಪ್ಪ**ನವರ ಕುಟುಂಬಕ್ಕೆ ಶುಭ ಹಾರೈಸುತ್ತದೆ.

# ನಾಗಾರಾಧನೆ - 2013



ಶ್ರೀದೇವಿ-ಭೂದೇವಿಯರೊಂದಿಗೆ ಶ್ರೀನಿವಾಸ



ಶ್ರೀ ಸುಬ್ರಹ್ಮಣ್ಯ ದೇವರ ಉತ್ಸವ



ತನಿ ಎರೆಯುತ್ತಿರುವುದು



ಶೃಂಗಾರಗೊಂಡಿರುವ ಶ್ರೀನಿವಾಸ ದೇವಸ್ಥಾನ



ಬಾಲ ಸುಬ್ರಹ್ಮಣ್ಯ



ಹಾಲೆರೆಯುತ್ತಿರುವ ಸಮುದಾಯದವರು



ದಾನಿಗಳಿಂದ ಕೊಡುಗೆ

# ನಾಗಾರಾಧನೆ - 2013



ಪೂಜಾಕೈಂಕರ್ಯದಲ್ಲಿ ಭಕ್ತರು



ಅಲಂಕೃತ ಸುಬ್ರಹ್ಮಣ್ಯ



ನಾಗೇಶ್ವರ ಕ್ಷೇತ್ರದ ಪುರಾತನ ಹುತ್ತ




ಅಲಂಕೃತ "ನಾಗಶಿಲೆ"





ಪ್ರಸಾದ ಸ್ವೀಕರಿಸುತ್ತಿರುವ ಬಂಧುಗಳು





ಚಿತ್ರಗಳು: ಕೆ.ಸಿ. ನಟರಾಜ್

# ಶಾಶ್ವತ ಅನ್ನಸಂತರ್ಪಣ ನಿಧಿಯ ದಾನಿಗಳು

*(ಕಳೆದ ಸಂಚಿಕೆಯಿಂದ)*

| | | |
|---|---|---|
| 27 | ಕೃಷ್ಣಶರ್ಮ ಎ.ಆರ್. | 4000-00 |
| 28 | ಲಕ್ಷ್ಮೀನಾರಾಯಣ್ ಕೆ.ಆರ್. | 4000-00 |
| 29 | ಶೇಷಾದ್ರಿ ಬಿ.ವಿ. | 4000-00 |
| 30 | ಬಿ.ಎನ್. ಶ್ರೀನಿವಾಸಯ್ಯ | 2500-00 |
| 31 | ಬಿ.ಎನ್. ಶ್ರೀನಿವಾಸಯ್ಯ | 2500-00 |
| 32 | ಲಲಿತಾ ಮೂರ್ತಿ | 4000-00 |
| 33 | ಸ್ವಾಮಿನಾಥನ್ ಆರ್.ಎನ್. | 4000-00 |
| 34 | ಬಾಲಸುಬ್ರಹ್ಮಣ್ಯಂ ಎಸ್.ಆರ್. | 4000-00 |
| 35 | ಶ್ರೀನಿವಾಸಯ್ಯ | 4000-00 |
| 36 | ಸತ್ಯನಾರಾಯಣ ಎಸ್. | 4000-00 |
| 37 | ಎಸ್.ಎನ್. ಲಕ್ಷ್ಮಣ್ | 1500-00 |
| 38 | ಕೃಷ್ಣಾ ಭಾಗವತರ್ ಮತ್ತು ಕುಟುಂಬ | 2500-00 |
| 39 | ರವಿ ಎ.ಆರ್. | 1500-00 |
| 40 | ಸರಸ್ವತಿ ನಟರಾಜನ್ | 2500-00 |
| 41 | ಶ್ರೀನಿವಾಸ ಎ. | 1500-00 |
| 42 | ದಾಕ್ಷಾಯಿಣಿ ಎನ್. | 1500-00 |
| 43 | ರಾಜಗೋಪಾಲ್ ಆರ್.ಎಸ್. | 4000-00 |
| 44 | ಭಾಸ್ಕರ್ ಡಿ.ಎಸ್. | 1500-00 |
| 45 | ಗೋವಿಂದನಾರಾಯಣ ಎನ್. | 1500-00 |
| 46 | ವಿನಾಯಕ ವಿ. | 4000-00 |
| 47 | ವೀಣಾ ಜಿ. | 1500-00 |
| 48 | ಅನಂತಸ್ವಾಮಿ ಬಿ.ಆರ್. | 1500-00 |
| 49 | ಕಾರ್ತಿಕ್ ಶೇಷಾಚಲಂ | 5000-00 |
| 50 | ಸತ್ಯನಾರಾಯಣ ಬಿ.ಸಿ. | 4000-00 |
| 51 | ರವಿಕಿರಣ್ ಟಿ.ಎನ್. | 1500-00 |
| 52 | ಸತ್ಯಮೂರ್ತಿ ಡಿ. | 1500-00 |
| 53 | ರಘುನಾಥ್ ಇ. | 1500-00 |
| 54 | ರಾಜಣ್ಣ ಕೆ. | 5000-00 |
| 55 | ಮಂಜುನಾಥ್ ಆರ್. | 5000-00 |
| 56 | ವೆಂಕಟ ಸುಬ್ಬರಾವ್ ಆರ್.ಎನ್. | 4000-00 |
| 57 | ಕೃಷ್ಣಾ ಪ್ರಕಾಶ್ | 1500-00 |
| 58 | ಸೋಮಸುಂದರ ಎಸ್. | 1500-00 |
| 59 | ಉಮೇಶ್ ಜಿ. | 2500-00 |
| 60 | ಅರುಣ್ ವೆಂಕಟಾಚಲಯ್ಯ | 4000-00 |
| 61 | ಛಾಯಾಪತಿ ಕೆ.ಎಸ್. | 4000-00 |
| 62 | ಇಂದಿರಾ, ಪಾರ್ವತಿ, ಶಾಂತ | 10,000-00 |
| 63 | ಶ್ರೀನಿವಾಸನ್ ಎಸ್. | 4000-00 |
| 64 | ವಿಶ್ವನಾಥ್ ಎ.ವಿ. | 2500-00 |
| 65 | ರಮೇಶ್ ಆರ್. | 1500-00 |
| 66 | ಭಗವಾನ್ ಆರ್. | 4000-00 |
| 67 | ಗಣೇಶ್ ಶ್ರೀಧರ್ | 1500-00 |
| 68 | ಸತ್ಯಮೂರ್ತಿ ಜಿ.ಎಸ್. | 4000-00 |
| 69 | ಮಂಜುನಾಥ್ ಆರ್.ಎನ್. | 1500-00 |
| 70 | ಉಮಾ ಎನ್. ಗೋವಿಂದ್ | 4000-00 |
| 71 | ಗೌರಮ್ಮ ಜಿ.ಎಸ್. | 1500-00 |
| 72 | ರಮೇಶ್ ಎನ್.ವಿ. | 4000-00 |
| 73 | ರಾಧಾಕೃಷ್ಣ ಟಿ.ಎಸ್. | 1500-00 |
| 74 | ರವಿಶಂಕರ್ ಆರ್.ಪಿ. | 1500-00 |
| 75 | ವಿಮಲಾ ಜಯರಾಮಣ್ಣ | 1500-00 |
| 76 | ನಾಗಭೂಷಣ ಟಿ.ಆರ್. | 4000-00 |
| 77 | ಸುಬ್ರಮಣ್ಯ ಎಸ್.ಜಿ. | 1500-00 |
| 78 | ಸುಂದರ್ ಹೆಚ್.ವಿ. | 2500-00 |
| 79 | ಸರಸ್ವತಿ ಕೆ. | 1501-00 |
| 80 | ಸುಬ್ಬಲಕ್ಷ್ಮಿ ಬಿ.ಕೆ. | 1500-00 |
| 81 | ರವಿಶಂಕರ್ ಎಂ.ಆರ್. | 1500-00 |
| 82 | ಮುರಳಿಕೃಷ್ಣ ಸಿ. | 2500-00 |
| 83 | ನಾರಾಯಣ ರಾವ್ ಕೆ.ಆರ್. | 4000-00 |
| 84 | ಹನುಮಂತ ಕೆ. | 4000-00 |
| 85 | ಶಾರದಮ್ಮ ಬಿ.ಎನ್. | 3000-00 |
| 86 | ಭಗವಾನ್ ಆರ್.ಎಸ್. | 1500-00 |
| 87 | ಲತಾ ಎಸ್.ಆರ್. | 1500-00 |
| 88 | ತಾರಾ ರವೀಂದ್ರ | 5000-00 |
| 89 | ಮಣಿ ಟಿ.ಎಸ್. | 1500-00 |
| 90 | ಕೃಷ್ಣಮೂರ್ತಿ ಎಸ್. | 1500-00 |
| 91 | ಗುರುದತ್ತ ಎಸ್. | 1500-00 |
| 92 | ಶ್ಯಾಮ ಮತ್ತು ಐಶ್ವರ್ಯ | 1500-00 |
| 93 | ಮುತ್ತುಸ್ವಾಮಿ ಜಿ. | 2500-00 |
| 94 | ಶ್ರೀನಿವಾಸ ಎನ್. | 5000-00 |
| 95 | ಪಾರ್ವತಿ ಚಂದ್ರಶೇಖರ್ | 2500-00 |
| 96 | ಕೃಷ್ಣ ಬಿ. ದಾಸ್ | 1500-00 |

*(ಮುಂದುವರೆಯುವುದು)*



## ಬರೆದರೆ ಪ್ರಕಟ

ಕಲ್ಲೂ ಒಂದು ಕಥೆ ಹೇಳುತ್ತೆ
ಹಕ್ಕಿಗಳು ಇಂಪಾಗಿ ಹಾಡುತ್ತೆ
ನೀರು ಜುಳು ಜುಳು ಶಬ್ದಿಸುತ್ತೆ
ಹಸಿರು ಸಮೃದ್ಧಿ ಸೂಚಿಸುತ್ತೆ

ಉಪಕಾರಿಗೆ, ಆರೋಗ್ಯ ವೃದ್ಧಿಸುತ್ತೆ
ಬೇಡನಿಂದ, ಮಹಾಕಾವ್ಯ ಹುಟ್ಟುತ್ತೆ
ಹೊಸಹಾದಿ, ಹೊಸದಿಕ್ಕು ತೋರುತ್ತೆ
ಅನುಭವ, ರಚಿಸಲು ಕಲ್ಪಿಸುತ್ತೆ

ನೀವು ಕಥೆ ಕವನ ಬರೆದರೆ
'ಬೃಹಚ್ಚರಣ' ಪ್ರಕಟಿಸುತ್ತೆ

■ ಕೆ. ಛಾಯಾಪತಿ ನಟರಾಜನ್

**PRASAD & KUMAR**
CHARTERED ACCOUNTANTS
315, 6th Main Road, HAL II Stage, Indiranagar,
Bangalore - 560 038

Partners:
B.N. Govinda Prasad, B.Com, FCA. ISA
Mobile: 9845128229
Email: prasad@bngassociates.co.in

B.N.G. Kumar, B.Com, AICWA, FCA
Mobile: 9980329574
Email: kumar@bngassociates.co.in

## AUDITOR'S REPORT

We have audited the attached **Receipts & Payments Account** of **"MYSORE MANJAPATHUR DRAVIDA BRUHACHARANA SANGHA"** for the **year 1st April 2012 to 31st March 2013**. This financial statement is the responsibility of the Board of Management of the Sangha. Our responsibility is to express an opinion on this financial statement based on our audit.

We conducted our audit in accordance with auditing standards generally accepted in India. Those standards require that we plan and perform the audit to obtain reasonable assurance about whether the financial statements are free of material misstatement. An audit includes examining, on a test basis, evidence supporting the amounts and disclosures in the financial statements. An audit also includes assessing the accounting principles used and significant estimates made by the management, as well as evaluating the overall financial statement presentation. We believe that our audit provides a reasonable basis for our opinion.

We report that:

(i) We have obtained all the information and explanations, which to the best of our knowledge and belief were necessary for the purposes of our audit ;

(ii) In our opinion, proper books of account as required by law have been kept by the Sangha so far as appears from our examination of those books ;

(iii) The Receipts & Payments Account dealt with by this Report are in agreement with the books of account ;

(iv) In our opinion and to the best of our information and according to the explanations given to us, the said account give a true and fair view in conformity with the accounting principles generally accepted in India of the state of affairs of the Sangha for the period 1st April 2012 to 31st March 2013.

**For Prasad & Kumar, Chartered Accountants (FRN 005837S)**

**Sd/-**
**BNG Kumar, Partner (M.No.201338)**

Bangalore
29th April 2013

# MYSORE MANJAPATHUR DRAVIDA BRUHACHARANA SANGHA

## RECEIPTS & PAYMENTS ACCOUNT FOR THE PERIOD 1ST APRIL 2012 TO 31ST MARCH 2013

| RECEIPTS | Rs. | PAYMENTS | Rs. |
|---|---|---|---|
| Opening Balances as on 1st April 2012 | | AGM Expenses | 34,952.00 |
| - Cash on Hand | 3,474.50 | | |
| - Cheques on Hand | 2,001.00 | Calendar Expenses (2012 & 2013) | 53,412.00 |
| - SB A/c in National Co-operative Bank Ltd | 76,370.75 | | |
| - Fixed Deposits in National Co-operative Bank Ltd | 12,52,724.00 | Nagaradhane Expenses | 65,000.00 |
| - SB A/c in Canara Bank, Chandapura | 7,279.86 | | |
| - Fixed Deposit in Canara Bank, Chandapura | 7,007.00 | Prathibha Puraskara and Honouring of Senior Members of the Community Function expenses | 44,660.00 |
| Receipts during the period from Members of the Sangha towards : | | Rates & Taxes | 15,400.00 |
| - Membership & Subscriptions | 77,451.00 | | |
| - Nagaradhane | 59,253.00 | Magazine Publication & Printing Expenses | 31,725.00 |
| - Calendar | 27,000.00 | | |
| - Voluntary Contributions | 30,114.75 | Printing & Stationery Expenses | 15,563.00 |
| - Shashwatha Annadhana Fund | 2,96,000.00 | | |
| | | Bank Charges | 11.00 |
| Interest received from Banks : | | | |
| - On Fixed Deposits | 1,40,497.14 | Closing Balances as on 31st March 2013 : | |
| - On Savings Bank A/c | 4,147.00 | - Cash on Hand | 736.25 |
| | | - SB A/c in National Co-operative Bank Ltd | 1,19,136.75 |
| | | - Fixed Deposits in National Co-operative Bank Ltd | 16,02,724.00 |
| | 19,83,320.00 | | 19,83,320.00 |

Sd/-
**S Somasundara - President**

Sd/-
**VS Mani - Secretary**

Sd/-
**S Sathya Narayana - Treasurer**

**As per our Report of even date**
**for Prasad & Kumar, Chartered Accountants (FRN 005837S)**

Sd/-
**BNG Kumar, Partner (M.No.201338)**

Bangalore
29th April 2013

ನೋಂದಣಿ ಮತ್ತು ಮುದ್ರಾಂಕ ಇಲಾಖೆ

(ನಿಯಮ 3(5) ನೋಡಿ (ಪ್ರಪತ್ರ ಕ್ರಮಾಂಕ 14))

# ನೋಂದಣಿ ಪ್ರಮಾಣ ಪತ್ರ

**ನೋಂದಣಿ ಸಂಖ್ಯೆ: ಜಿನೋಬ/ಎಸ್‌ಒಆರ್/49/2012–13**


ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ 1960 (1960 ನೆಯ ಇಸವಿ 17ನೇ ಕ್ರಮಾಂಕದ ಕರ್ನಾಟಕ ಅಧಿನಿಯಮದ) ಮೇರೆಗೆ **"ಮೈಸೂರು ಮಂಜಪತ್ತೂರ್ ದ್ರಾವಿಡ ಬೃಹಚರಣ ಸಂಘ" ನಂ.439/390/1, ಕೇರಾಫ್ ಎಸ್. ಮಣಿ, ಕಿತ್ತಗಾನಹಳ್ಳಿ ಗ್ರಾಮ, ಬೊಮ್ಮಸಂದ್ರ ಪೋಸ್ಟ್, ಬೆಂಗಳೂರು–560 099.** ಈ ಸಂಘವು ಇಂದು ನೋಂದಾಯಿಸಲಾಗಿದೆ ಎಂದು ಈ ಮೂಲಕ ಪ್ರಮಾಣೀಕರಿಸುತ್ತೇನೆ.

ಪಾವತಿಸಲ್ಪಟ್ಟ ಶುಲ್ಕ ರೂಪಾಯಿಗಳು (ಅಂಕಿಗಳಲ್ಲಿ) **1,000/-** (ಅಕ್ಷರಗಳಲ್ಲಿ) ಒಂದು ಸಾವಿರ **ರೂಪಾಯಿಗಳು ಮಾತ್ರ, ಎರಡು ಸಾವಿರದ ಹನ್ನೆರಡನೇ ಇಸವಿ ನವೆಂಬರ್ ತಿಂಗಳು ಎರಡನೇ (02–11–2012)** ದಿನಾಂಕದಂದು ನನ್ನ ಸಹಿ ಮತ್ತು ಮುದ್ರೆಯೊಂದಿಗೆ ನೀಡಲ್ಪಟ್ಟಿದೆ.

ಸಂಘಗಳ ನೋಂದಣಾಧಿಕಾರಿಯವರ ಮೊಹರು
THE SEAL OF THE REGISTRAR OF SOCIETY
BANGALORE
ಬೆಂಗಳೂರು

ಸಂಘಗಳ ರಿಜಿಸ್ಟ್ರಾರ್
ಸಂಘಗಳ ನೋಂದಣಾಧಿಕಾರಿಗಳು
ಬಸವನಗುಡಿ ನೋಂದಣಿ ಜಿಲ್ಲೆ
ಬೆಂಗಳೂರು.

# ನೆನಪಿನಾಳದಿಂದ ಒಂದು ಛಾಯಾಚಿತ್ರ



ಗುಮ್ಮಳಾಪುರದ ವೆಂಕಟಕೃಷ್ಣ ಅಯ್ಯರ್ ಅವರ ಅವಿಭಕ್ತ ಕುಟುಂಬ (1960)

## ಅನುಭವದ ಮಹತ್ವ

(ಸೃಷ್ಟಿ ವೆಂಚರ್ಸ್ ಸ್ಪರ್ಧೆಯ ಬಹುಮಾನಿತ ಲೇಖನ)

"ನವ್ಯ ಫೈನಾನ್ಸ್ ಕಂಪೆನಿ"ಯ ಫಲಕದಲ್ಲಿ ಡಿ.ವಿ.ಜಿ.ಯವರ ಮಂಕುತಿಮ್ಮನ ಕಗ್ಗದ ಪದ್ಯ ಬರೆದಿತ್ತು. **"ಹೊಸ ಚಿಗುರು ಹಳೇಬೇರು ಕೂಡಿರಲು ಮರ ಸೊಬಗು ॥ ಹೊಸಯುಕ್ತಿ ಹಳೆ ತತ್ವದೊಡಗೂಡೆ ಧರ್ಮ ಋಷಿ ವಾಕ್ಯದೊಡನೆ ವಿಜ್ಞಾನ ಕಲೆ ಮೇಳವಿಸೆ ಜಸವು ಜನಜೀವನಕ್ಕೆ ಮಂಕುತಿಮ್ಮ"**

ನೋಡುತ್ತಾ ನವೀನ್ ಭಟ್‌ರವರು ನಗೆ ಬೀರಿದರು. ಅವರ ನೆನಪು ಆಗ 20 ವರ್ಷಗಳ ಹಿಂದಕ್ಕೋಡಿತು. ಆಗ ಅವರು ಹೊಸ ಕಂಪೆನಿ ಪ್ರಾರಂಭ ಮಾಡುವ ಹುರುಪಿನಲ್ಲಿದ್ದರು. ಆಗ ಅವರು ಚಿಗುರು ಮೀಸೆಯ ಯುವಕ. ವಿಲಾಯತಿಯಿಂದ ಆಗ ತಾನೆ ಎಂ.ಬಿ.ಎ. ಪದವಿ ಪಡೆದು ಬಂದಿದ್ದರು. ತಮ್ಮ ಕಂಪೆನಿಗೆ ಯುವಕ ಯುವತಿಯರನ್ನೇ ನೇಮಿಸಿದ್ದರು. ಅದರಿಂದ ಕಾರ್ಯಕ್ಷಮತೆ ಹೆಚ್ಚುವುದೆಂದು ಅವರ ಭಾವನೆ. ಆದರೆ ದಿನೇ ದಿನೇ ಕಂಪೆನಿಯ ಲಾಭದ ಮಟ್ಟ ಕಡಿಮೆಯಾಗುತ್ತಾ ಬಂತು. ಶೇರು ಹೊಂದಿರುವವರು ಒಬ್ಬೊಬ್ಬರಾಗಿ ತಮ್ಮ ಶೇರುಗಳನ್ನು ವಾಪಸ್ಸು ಪಡೆಯತೊಡಗಿದರು. ನವೀನ್ ಭಟ್ಟರು ಮುಂದೇನು ಎಂದು ಚಿಂತಾಕ್ರಾಂತರಾದರು. ಅನಂತರ ಅವರ ಆತ್ಮೀಯ ಸ್ನೇಹಿತ ವಿಜಯ್ ಕೂಡ ತನ್ನ 25 ಶೇಕಡ ಶೇರುಗಳನ್ನು ವಾಪಸು ಕೇಳಿದಾಗ ಅವನಿಗೆ ಅದನ್ನು ಕೊಟ್ಟು ಕಳುಹಿಸಿದರು.

ನವೀನ್ ಭಟ್ಟರು ತಾನು ಎಲ್ಲಿ ಎಡವುತ್ತಿದ್ದೇನೆ ಎಂದು ಯೋಚಿಸತೊಡಗಿದರು. ತಾನು ಬಿಗ್ ಷೈವ್ ಮಾಡೆಲ್ ಆಗಿದ್ದರೂ ತನಗೆ ಯಾಕೆ ಈ ರೀತಿ ಸೋಲಾಗುತ್ತಿದೆ ಎಂದು ಯೋಚಿಸತೊಡಗಿದರು. ಅವರು ಕಂಪೆನಿಯ ಲೆಕ್ಕ ಪರಿಶೋಧನೆ ಮಾಡಿ ಬರಬರುತ್ತಾ ಲಾಭ ಕಡಿಮೆಯಾಗುತ್ತಿದೆ ಎಂದು ಕೊರಗತೊಡಗಿದರು. ಮತ್ತೆ ಕಂಪೆನಿಯ ತುರ್ತು ಸಭೆ ಕರೆಯಲು ತಮ್ಮ ಪಿ.ಎ.ಗೆ ಆದೇಶ ಕಳುಹಿಸಿದರು. ಅದಲ್ಲದೆ ಈ ಸಭೆಗೆ ಡೈರೆಕ್ಟರ್, ಶೇರುದಾರರು ಹಾಗೂ ಕಂಪೆನಿಯ ಎಲ್ಲಾ ಪ್ರಮುಖರು ಬರಬೇಕೆಂದು ಸೂಚಿಸಿದರು.

ಹೀಗೆ ಅವರು ಯೋಚಿಸುತ್ತಿದ್ದಾಗ ಪಿ.ಎ. ಬಂದು ತಮ್ಮನ್ನು ಕಾಣಲು ತಮ್ಮ ತಂದೆಯ ಸ್ನೇಹಿತರು ಬಂದಿದ್ದಾರೆ ಎಂದನು. ಅದಕ್ಕವರು 'ಒಳಗೆ ಕಳುಹಿಸು' ಎಂದರು. "ನಮಸ್ಕಾರ ನವೀನ್. ಹೇಗಿದ್ದೀಯ?" ಎಂದು ಕೇಳಿದರು. "ನಾನು ಚೆನ್ನಾಗಿದೀನಿ ಸಾರ್" ಎಂದು ಹೇಳಿದ. "ಇಲ್ಲೇ ಬಂದಿದ್ದೆ ಹಾಗೇ ನಿನ್ನ ಕಂಪೆನಿಯನ್ನು ನೋಡಲು ಬಂದೆ" ಎಂದರು. "ಬನ್ನಿ ಕುಳಿತುಕೊಳ್ಳಿ" ಎಂದು ಹೇಳಿದ. "ಅಂದ ಹಾಗೆ ನೀನೇನು ಯೋಚಿಸುತ್ತಾ ಇದ್ದೀಯಾ" ಎಂದು ಕೇಳಿದರು. "ನನ್ನ ಕಂಪೆನಿಯ ಲಾಭ ಇಳಿಮುಖವಾಗಿದೆ. ಶೇರುದಾರರು ತಮ್ಮ ಶೇರಿನ ಹಣವನ್ನು ತೆಗೆದುಕೊಂಡು ಹೋಗುತ್ತಿದ್ದಾರೆ. ಹೀಗಾದರೆ ಕಂಪೆನಿ, ಏನು ಮಾಡುವುದು ಎಂದು ತಿಳಿತಾ ಇಲ್ಲ." "ಇಲ್ಲಿ ಎಷ್ಟು ಮಂದಿ ಡೈರೆಕ್ಟರ್ ಇದ್ದಾರೆ. ಅವರೇನನ್ನುತ್ತಾರೆ" ಎಂದರು ಆ ಹಿರಿಯರು. "ಎಲ್ಲಾ ಡೈರೆಕ್ಟರ್ ಹಾಗೂ ಶೇರುದಾರರು ಸಹ ತರುಣರು. ಅವರು ಉತ್ಸಾಹಿ ಕೆಲಸಗಾರರು. ಆದರೆ ನಿರ್ಧಾರ ತೆಗೆದುಕೊಳ್ಳುವ ವಿಷಯ ಬಂದರೆ ಆತುರದ ನಿರ್ಧಾರ ತೆಗೆದುಕೊಳ್ಳುತ್ತಾರೆ. ಅದು ನನಗೆ ಅನೇಕ ಸಲ ಅನುಭವವಾಗಿದೆ. ಆದರೆ ಅದಕ್ಕೆ ಪರಿಹಾರವೇನೆಂಬುದು ತಿಳಿಯದಾಗಿದೆ."

ಅದಕ್ಕೆ ಆ ಹಿರಿಯರು "ಇಲ್ಲಿ ಅನುಭವದ ಕೊರತೆಯಿದೆ. ಯುವಕರ ಯುಕ್ತಿಯೊಂದಲ್ಲದೆ ಹಳಬರ ತತ್ವವೂ ಸೇರಿದರೆ ನಿಮ್ಮ ಕಂಪೆನಿ ಅಭಿವೃದ್ಧಿ ಹೊಂದುತ್ತದೆ. ಒಬ್ಬ ಅನುಭವಿ ಹಿರಿಯರನ್ನು ಆಪ್ತ ಸಲಹೆಗಾರರನ್ನಾಗಿ ನೇಮಿಸಿಕೋ ಸಮಸ್ಯೆ ಪರಿಹಾರವಾಗುತ್ತದೆ" ಎಂದರು. "ತಾವೇ ಏಕೆ ನನ್ನ ಆಪ್ತ ಸಲಹೆಗಾರರಾಗಬಾರದು" ಎಂದು ನವೀನ್ ಕೇಳಿದ. ಅದಕ್ಕವರು "ನಾನು ವಯಸ್ಸಾದವನು. ನನಗೆ ದಿನಾ ಕಂಪೆನಿಗೆ ಬರುವುದಕ್ಕೆ ಆಗುವುದಿಲ್ಲಪ್ಪ. ಏನು ಮಾಡಲಿ." ಅದಕ್ಕೆ ನವೀನ್ ಹೇಳಿದ. "ತಾವು ದಿನಾ ಬರಬೇಕಿಲ್ಲ. ಪ್ರತಿ ಕಂಪೆನಿಯ ಸಭೆಯಲ್ಲಿ ತಮ್ಮ ಸಲಹೆ ಸೂಚನೆಗಳನ್ನು ಕೊಡಬಹುದು. ತಾವು ಅಲ್ಲಿಗೆ ಬರುವ ಮತ್ತು ಹೋಗುವ ವ್ಯವಸ್ಥೆ ಮಾಡುತ್ತೇವೆ. ತಮಗೆ ಸೂಕ್ತ ವೇತನವನ್ನು ಕೊಡುತ್ತೇವೆ. ದಯವಿಟ್ಟು ಈ ವಿಷಯಕ್ಕೆ ಒಪ್ಪಿಗೆ ಕೊಡಿ" ಎಂದು ಕೇಳಿದನು. "ನೀನು ನನ್ನ ಸ್ನೇಹಿತನ ಮಗ, ನಾನು ಅಷ್ಟು ಮಾಡಲಾರೆನಾ. ಖಂಡಿತ ಬರುತ್ತೇನೆಂದು" ಹೇಳಿದರು.

ತುರ್ತು ಸಭೆಯಲ್ಲಿ ಅವರನ್ನು ಹಿರಿಯ ಸಲಹೆಗಾರರಾಗಿ ಅನುಮೋದಿಸಲಾಯಿತು ಅತ್ಯುತ್ತಮ ಸಲಹೆ ಹಾಗೂ ಮಾರ್ಗದರ್ಶನಗಳಿಂದ ಕಂಪೆನಿಯ ಲಾಭ ದ್ವಿಗುಣವಾಯಿತು. ಶೇರುದಾರರು ಪುನಃ ಶೇರುಗಳನ್ನು ಪಡೆಯಲು ಪ್ರಾರಂಭಿಸಿದರು. 5 ವರ್ಷಗಳಲ್ಲಿ ಕಂಪೆನಿ ಪ್ರತಿಷ್ಠಿತ ಕಂಪೆನಿಯಾಗಿ ಹೆಸರು ಗಳಿಸಿತು. ನವೀನ್‌ಭಟ್‌ರವರು ದೊಡ್ಡ ಉದ್ಯಮಿ ಆದರು.

ಬೆಳ್ಳಿಹಬ್ಬ ಆಚರಿಸಿದ ಕಂಪೆನಿಯು ವಿಶ್ವದ ನಾನಾ ಭಾಗಗಳಲ್ಲಿ ಶಾಖೆಗಳನ್ನು ತೆರೆಯಿತು. 50000 ಜನರು ಆ ಕಂಪೆನಿಯಲ್ಲಿ ಕೆಲಸ ಮಾಡುತ್ತಿದ್ದರು. ಹಿರಿಯ ವ್ಯಕ್ತಿಯ ಮಾರ್ಗದರ್ಶನ ನವೀನ್ ಭಟ್ಟರ ದಕ್ಷತೆ, ಯುವ ಪೀಳಿಗೆಯ ಯುಕ್ತಿ, ಹಿರಿಯರ ತತ್ವ, ಧರ್ಮ, ವಿಜ್ಞಾನ ಕಲೆ ಇವುಗಳಿಂದ ಕಂಪೆನಿ ಜಗಜಗಿಸಿತು.

ಈಗಲೂ ಆ ಕಂಪೆನಿ ಈ ಮಂಕುತಿಮ್ಮನ ಕಗ್ಗದ ಸಾಲುಗಳಿಂದ ವಿಜೃಂಭಿಸುತ್ತಿದೆ.

■ ಕೆ.ಆರ್. ನಾಗರತ್ನ

## ಒದುಗರ ಪತ್ರಗಳು



ಅಧ್ಯಕ್ಷರೇ,

ಸಂಘದಿಂದ ಪ್ರಕಟವಾದ 2013–14ನೇ ಸಾಲಿನ ಕ್ಯಾಲೆಂಡರ್ ಬಹಳ ಸೊಗಸಾಗಿ ಮೂಡಿಬಂದಿದೆ. ಸಂಘವು ಪ್ರಕಟಿಸುತ್ತಿರುವ ತ್ರೈಮಾಸಿಕ ಪತ್ರಿಕೆಯಲ್ಲಿ ಪ್ರಕಟವಾಗುತ್ತಿದ್ದ "ಬೃಹಚ್ಚರಣ ಭಾಷೆಯ" ವಿಚಾರ ಈಗ ಸದ್ಯದಲ್ಲಿ ಬರುತ್ತಿಲ್ಲ. ನನ್ನದೊಂದು ಚಿಕ್ಕ ಕೋರಿಕೆ. ಏನೆಂದರೆ, ತ್ರೈಮಾಸಿಕ ಪತ್ರಿಕೆಯನ್ನು ಸ್ವಲ್ಪ ನಮ್ಮ ಭಾಷೆಯ ಬಗ್ಗೆ ತಿಳಿಯುವುದಕ್ಕಿಂತ ದಿನನಿತ್ಯದಲ್ಲಿ ಒಂದು ಮನೆಯಲ್ಲಿ ಸಾಮಾನ್ಯವಾಗಿ ಆಗುವ ಮಾತುಕತೆಗಳನ್ನು ಸಂಗ್ರಹಿಸಿ ಬೃಹಚ್ಚರಣ ಭಾಷೆಯಲ್ಲೇ ಒಂದು ಪೂರ್ಣ ಪ್ರಮಾಣದ ಪುಸ್ತಕ ಮಾಡಿದರೆ ಬಹಳ ಜನ ಈ ಭಾಷಾಭಿಮಾನಿಗಳಿಗೆ ಸಂತೋಷವಾಗುತ್ತದೆ. ಇನ್ನೂ ಕಲಿಯುವವರಿಗೆ ಪ್ರೋತ್ಸಾಹದಾಯಕವಾಗಿರುತ್ತದೆ. ಈ ಪುಸ್ತಕವನ್ನು ಒಂದು ನಿಗದಿತ ಬೆಲೆ ಗುರುತು ಮಾಡಿ ಸಂಘದ ಯಾವುದೇ ಕಾರ್ಯಕ್ರಮದಲ್ಲಿ ಮಾರಾಟ ಮಾಡಿದರೆ ನಮ್ಮ ಭಾಷೆ ಹೆಚ್ಚು ಜನಪ್ರಿಯವಾಗುತ್ತದೆ.

ಇದೇ ರೀತಿ ನಾಗಾರಾಧನೆ ಸಮಯದಲ್ಲಿ ಮಾರಾಟಕ್ಕೆ ಇಟ್ಟಿದ್ದ ಹುಂಡಿಯನ್ನೂ ಎಲ್ಲಾ ಕಾರ್ಯಕ್ರಮಗಳಲ್ಲೂ ಇಡಬಹುದೆಂದು ನನ್ನ ಅನಿಸಿಕೆ. ಸಂಘದ ಕೆಲಸಗಳು ದಿನೇದಿನೇ ಬಹಳ ಚೆನ್ನಾಗಿ ರೂಪುಗೊಳ್ಳುತ್ತಿರುವುದಕ್ಕೆ ನಮ್ಮ ಹಾರೈಕೆಗಳು.

★ ★ ★

16–3–2013ನೇ ತಾರೀಖು ನಡೆದ ಕಿತ್ತಿಗಾನಹಳ್ಳಿಯ ನಾಗಾರಾಧನೆ ಮತ್ತು ಸುಬ್ರಹ್ಮಣ್ಯ ದೇವರ ಉತ್ಸವ ಕಾರ್ಯಕ್ರಮ ಬಹಳ ಅಚ್ಚುಕಟ್ಟಾಗಿ, ಶಿಸ್ತುಬದ್ಧವಾಗಿ, ಮನೋಹರವಾಗಿ ನಡೆಯಿತು. ಬೃಹಚ್ಚರಣ ಬಂಧುಗಳು ಮತ್ತು ಮಿತ್ರರು ಬೆಳಿಗ್ಗೆಯಿಂದಲೇ ಬಂದು ನಾಗಪ್ಪನಿಗೆ ತನಿ ಎರೆದು ಲಕ್ಷ್ಮೀ, ಪದ್ಮಾವತಿ ಸಮೇತ ಶ್ರೀನಿವಾಸ ದೇವರ, ಸುಬ್ರಹ್ಮಣ್ಯ ದೇವರ, ನವಗ್ರಹಗಳ ದರ್ಶನ, ಮಂಗಳಾರತಿ, ತೀರ್ಥ ಸ್ವೀಕರಿಸಿದರು.

ಮಧ್ಯಾಹ್ನದ ಪಾನಕ, ಕೋಸಂಬರಿ, ಹುಳಿಅವಲಕ್ಕಿಯ ಪ್ರಸಾದ ವಿನಿಯೋಗ ಸಮಯದಲ್ಲಿ ಯಾವುದೇ ನೂಕು ನುಗ್ಗಲು ಆಗದ ರೀತಿ ಸಂಘ ತೆಗೆದುಕೊಂಡ ಕ್ರಮ ನಡೆಸಿದ ರೀತಿ ಬಹಳ ಚೆನ್ನಾಗಿತ್ತು. ಪ್ರಸಾದವೂ ಎಲ್ಲರಿಗೂ ತಲುಪುವಂತಾಯಿತು. ಯಾರೂ ವಂಚಿತರಾಗಲು ಅವಕಾಶ ಆಗಲಿಲ್ಲ. ಬಂದ ಬಂಧುಗಳೂ ಸಹ ಸಹಕರಿಸಿದರು.

ದೇವಾಲಯದ ಸುತ್ತಮುತ್ತ ನಡೆದಾಡುವ ಜಾಗದಲ್ಲಿ ಮಾಡಲಾಗಿದ್ದ ಕಾಂಕ್ರೀಟ್ ನೆಲ ಮತ್ತು ಬಿಸಿಲಿಗಾಗಿ ಹಾಕಿದ್ದ ಶಾಮಿಯಾನ ಎಲ್ಲರಿಗೂ ಸಂತೋಷ ತರುವಂತಹುದಾಗಿತ್ತು. ಪ್ರಸಾದವೂ ತುಂಬಾ ರುಚಿಯಾಗಿದ್ದು ಬಂದ ಭಕ್ತರ ಆಸೆಗಳೆಲ್ಲವೂ ಇದೇ ರೀತಿ ಪೂರೈಸಿರುತ್ತದೆ ಎಂದು ನನ್ನ ನಂಬಿಕೆ. ಸಂಘಕ್ಕೆ ನಮ್ಮ ಹೃತ್ಪೂರ್ವಕ ಹಾರೈಕೆಗಳು, ಧನ್ಯವಾದಗಳು ನಮ್ಮ ಬಂಧುಗಳಿಂದ ಹೀಗೆಯೇ ಸಹಕಾರ ದೊರೆತರೆ ಸಂಘದ ಏಳಿಗೆಯಲ್ಲಿ ಸಂದೇಹವಿಲ್ಲ.

ನಿಮ್ಮ ವಿಶ್ವಾಸಿ



–ರಾ. ರಮೇಶ್
ರಾಜಾಜಿನಗರ

## ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘ (ರಿ)

[ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ (ರಿ) ಅಂಗ ಸಂಸ್ಥೆ]

"ಶ್ರೀ ಶೇಷಗಿರಿ ನಿಲಯ" ಕಿತ್ತಗಾನಹಳ್ಳಿ, ಬೆಂಗಳೂರು - ೫೬೦ ೦೯೯

೦೧, ಮೇ ೨೦೧೩

### ಸಾಮಾನ್ಯ ಸರ್ವಸದಸ್ಯ ಸಭೆಯ ಸೂಚನಾ ಪತ್ರ

*ಮಾನ್ಯ ಸದಸ್ಯರೇ*

ಮೈಸೂರು ಮಂಜಪತ್ತೂರು ದ್ರಾವಿಡ ಬೃಹಚ್ಚರಣ ಸಂಘದ ೨೦೧೨-೧೩ನೇ ಸಾಲಿನ ವಾರ್ಷಿಕ ಸರ್ವಸದಸ್ಯರ ಸಭೆಯನ್ನು ದಿನಾಂಕ: ೨೬-೫-೨೦೧೩, ಭಾನುವಾರ, ಸಾಯಂಕಾಲ ೫.೦೦ ಗಂಟೆಗೆ ಶ್ರೀ ಕುಕ್ಕೆ ಸುಬ್ರಹ್ಮಣ್ಯ ಮಠ, ಶ್ರೀ ಮಲ್ಲಿಕಾರ್ಜುನ ದೇವಸ್ಥಾನದ ಆವರಣ, ನರಸಿಂಹರಾಜ ಕಾಲೋನಿ, ಬೆಂಗಳೂರು-೪ ಇಲ್ಲಿ ಏರ್ಪಡಿಸಲಾಗಿದೆ.

**ವಿಷಯ ಸೂಚಿ :**

೧. ಪ್ರಾರ್ಥನೆ, ೨. ಪ್ರಾಸ್ತಾವಿಕ ನುಡಿ, ೩. ೨೦೧೨-೧೩ನೇ ಸಾಲಿನ ವಾರ್ಷಿಕ ವರದಿ ಮಂಡನೆ, ೪. ೨೦೧೨-೧೩ರ ಆಯವ್ಯಯ ಪತ್ರ ಮಂಡನೆ - ಅಂಗೀಕಾರ, ೫. ಸದಸ್ಯರ ಸಲಹೆ/ಸೂಚನೆ, ೬. ಅಧ್ಯಕ್ಷರ ನುಡಿ, ೭. ವಂದನಾರ್ಪಣೆ.

**ಸಂಜೆ ಲಘು ಉಪಹಾರವನ್ನು ಏರ್ಪಡಿಸಲಾಗಿದೆ.**

ಪೋಷಕರು ಹಾಗೂ ಸದಸ್ಯರೆಲ್ಲರೂ ಸರ್ವ ಸದಸ್ಯರ ಸಭೆಗೆ ಆಗಮಿಸಿ ತಮ್ಮ ಅಮೂಲ್ಯವಾದ ಸಲಹೆಗಳನ್ನು ನೀಡಲು ಕೋರುತ್ತೇವೆ. ೨೦೧೨-೧೩ನೇ ಆಯವ್ಯಯದ ಪತ್ರದ ಬಗ್ಗೆ ಚರ್ಚಿಸಬೇಕಿದ್ದಲ್ಲಿ ಅಧ್ಯಕ್ಷರು ಅಥವಾ ಕಾರ್ಯದರ್ಶಿಗಳಿಗೆ ಲಿಖಿತ ಪತ್ರದ ಮೂಲಕ ಮುಂಚಿತವಾಗಿ ತಿಳಿಸುವುದು.

**ಅಧ್ಯಕ್ಷರು,**
**ಬೃಹಚ್ಚರಣ ಸಂಘ**



ಶ್ರೀನಿವಾಸ ದೇವರ ನೂತನ ನಿರ್ಮಿತ ರಥ, ಕಿತ್ತಿಗಾನಹಳ್ಳಿ

**ಲೇಖನಗಳನ್ನು ಕಳುಹಿಸಬೇಕಾದ ವಿಳಾಸ:**

**ಕೆ.ಎಸ್. ಮಧುಸೂದನ**
ಸಂಪಾದಕರು
#155ವೈ, 3ನೇ ಮುಖ್ಯರಸ್ತೆ, 7ನೇ ಬ್ಲಾಕ್, ಬನಶಂಕರಿ 3ನೇ ಹಂತ
ಬೆಂಗಳೂರು-560 085. ಮೊ: 99021 45359

Post

54 M 055
RAMESH R
# 626/14 5TH MAIN
4TH BLOCK
RAJAJINAGAR, BANGALORE 560 010
26618813
7259269434

ಜಾಹೀರಾತು ನೀಡಿ ಸಹಕರಿಸಬೇಕಾಗಿ ಪ್ರಾರ್ಥನೆ

Published by Sri S. Somasundara, President, 'BRIHACHARANA SANGHA' No. 8, 3rd Cross, Annaiyyappa Block, Kumarapark West, Bengaluru-560 020.
Printed at **Ila Mudrana,** No. 36, 40Ft. Road, Raghavanagar, NTY Layout, Bengaluru-560 026.